ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೫, ಸಂಚಿಕೆ ೧೧/೧೨, ಏಪ್ರಿಲ್-ಮೇ-೨೦೧೮

ಕನ್ನಡವೆ ತಾಯ್ನುಡಿಯು
ಕರುನಾಡು ತಾಯ್ನಾಡು
ಕನ್ನಡಿಗನು ನೀನೆಂಬ
ಅಭಿಮಾನವಿರಲಿ

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೨

ಚಿಲುಮೆಯ ಒಳಗೆ

ಮಂಕುತಿಮ್ಮನ ಕಗ್ಗ ... ಪು. ೫

ಚಿಲುಮೆಯ ಒಳಗೆ

ರಾಂ ರಾಮ ... ಪು. ೬

ಕಥಾಚಿಲುಮೆ, ರೆಸಿಪಿ, ಕಾವ್ಯ ... ಪು. ೯/೧೦

ಚಿಲುಮೆಯ ಒಳಗೆ

ಪದಪುಂಜ ... ಪು. ೧೨

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೨೨

ಕಥೆ "ಹೊಣೆಗಾರ"

ಪು. ೧೪

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಸಮಾಜದಲ್ಲಿ ಬಾಳಿ ಬದುಕಬೇಕಾದ ಮನುಜನಲ್ಲಿ ಇರಬೇಕಾದ ಅವಶ್ಯಕ ಗುಣಗಳಲ್ಲಿ ನಮ್ರತೆಯು ಅತಿಮುಖ್ಯವೆಂದು ತಿಳಿದವರು ಹೇಳುತ್ತಾರೆ. ಸೌಜನ್ಯಯುಕ್ತ ವಿನಯವಂತಿಕೆ ಎಂಥವರನ್ನೂ ಹತ್ತಿರ ಕರೆದುಕೊಂಡುಬಿಡುತ್ತದೆ. ಅತೀ ವಿನಯವಂತಿಕೆ ಸಲ್ಲದು ಎಂದು ಸುಭಾಷಿತಗಳು ಸಾರಿದ್ದರೂ, ವಿವೇಕದಿಂದ ನಡೆಯುವ ಮನುಜನಲ್ಲಿರುವ ಎಲ್ಲಾ ವಿನಯವನ್ನು ಅವನೆಷ್ಟು ನಮ್ರನೆಂದು ಜಗತ್ತಿಗೆ ತೋರಿಸಿಕೊಡುತ್ತದೆಯೇ ಹೊರತು ಅವನನ್ನು ದೂರ್ತನ ಪಟ್ಟಿಗೆ ಸೇರಿಸುವುದಿಲ್ಲ.

ಜಗತ್ತಿನ ಆಗುಹೋಗುಗಳನ್ನು ತೆರೆದ ಮನಸ್ಸಿನಿಂದ ನಾವು ಅವಲೋಕಿಸಲು ಶುರುಮಾಡಿದಾಗ, ನಾವು "ಸಾಧಿಸಿದ್ದೇವೆ" ಎಂದು ಹೇಳಿಕೊಂಡು ಮೆರೆದಾಡುವ ಹಮ್ಮುಗಾರಿಕೆ ಹಾಗೆಯೇ ಇಳಿದುಬಿಡುತ್ತದೆ. ಒಂದು ಕಡೆ, ಕೇವಲ ಒಂದು ಇಟ್ಟಿಗೆ ಇಟ್ಟು, ಭವನವನ್ನು ಕಟ್ಟಲು ನಾನೇ ಸಹಾಯ ಮಾಡಿಬಿಟ್ಟೆ ಎಂದು ಘಂಟಾಘೋಷ ಮಾಡುವ ಹಲವರನ್ನು ನೋಡುತ್ತೇವೆ. ಮತ್ತೊಂದೆಡೆ, ಯಾವ ಫಲಾಪೇಕ್ಷೆಯೂ ಇಲ್ಲದೆ, ಸಾಲುಮರದ ತಿಮ್ಮಕ್ಕ, ತನ್ನ ಮಕ್ಕಳಂತೆ ಬೆಳೆಸಿ ಹೆಮ್ಮರವಾಗಿಸಿದ ಸಹಸ್ರ ಮರಗಳನ್ನು ಕಾಣುತ್ತೇವೆ. ಇವೆರೆಡರ ನಡುವೆ ನಾವು ಎಲ್ಲಿ ನಿಲ್ಲುತ್ತೇವೆಂದು ಅವಲೋಕಿಸಿದರೆ, ನಾವೆಷ್ಟು ಅಲ್ಪ ಪರೋಪಕಾರಿಗಳೋ ಎಂದೆನಿಸಿಬಿಡುತ್ತದೆ.

ಬಲಗೈ ಕೊಡುವ ದಾನ ಎಡಕ್ಕೆ ತಿಳಿಯಬಾರದು ಎಂಬ ಯುಕ್ತಿ ಸದಾ ನಮ್ಮೆಲ್ಲರಲ್ಲಿ ಜಾಗೃತವಾಗಿದ್ದರೆ ಅದೆಷ್ಟು ಚೆನ್ನವಲ್ಲವೇ. ನಾನು ಮಾಡಿದೆ, ನನ್ನಿಂದಲೇ ಇಷ್ಟೆಲ್ಲಾ ಆಗಿದ್ದು, ನಾನಿರದಿದ್ದರೆ ಏನೂ ನಡೆಯದು ಎಂದೆಲ್ಲ ಸುತ್ತಮುತ್ತ ಕೇಳಿದಾಗ ಡಿ.ವಿ.ಜಿ ಅವರ ಈ ಪದ ನೆನೆಯಲು ಯೋಗ್ಯ.

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ।
ಫಲ ಮಾಗುವಂದು ತುತ್ತೂರಿ ದನಿಯಿಲ್ಲ ।।
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ।
ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ

ಹೊರನಾಡ ಚಿಲುಮೆಯು ಈ ಸಂಚಿಕೆಯೊಂದಿಗೆ ಐದು ವರ್ಷ ಪೂರ್ಣಗೊಳಿಸುತ್ತಿದೆ. ಹೊರನಾಡಿನಲ್ಲಿ "ಕನ್ನಡ" ಎಂಬ ಪ್ರಾಣಶಕ್ತಿಯೊಂದಿಗೆ ಹುಟ್ಟಿದ ಈ ಕೂಸನ್ನು ನೀವೆಲ್ಲರೂ ಸೇರಿ ಬಾಲ್ಯಕ್ಕೆ ಬೆಳೆಸಿದ್ದೀರಿ. ಓದುಗರಿಗೆ ಪಡ್ರಸೋಪೇತ ಸಾಹಿತ್ಯವನ್ನು ಬಡಿಸಿದ ಹಿರಿಮೆಯು ಆಯಾ ಲೇಖಕರಿಗೇ ಸಲ್ಲುತ್ತದೆ. ರುಚಿಯಾದ ಕನ್ನಡದಡುಗೆಯನ್ನು ಬಡಿಸಿದ ಬರಹಗಾರರಿಗೆ ಹೃತ್ಪೂರ್ವಕ ಧನ್ಯವಾದಗಳು. ಕನ್ನಡ ಭೋಜನವನ್ನು ಪ್ರೀತಿಯಿಂದ ಉಂಡು, "ಓಹ್! ಇದು ಬಲು ಸೊಗಸಾಗಿತ್ತು," ಎಂದೂ, ಕೆಲವೊಮ್ಮೆ "ಇದಕ್ಕೆ ಉಪ್ಪು ಜಾಸ್ತಿಯಾಗಿದೆಯೇನೋ, ನೋಡುತ್ತೀರಾ" ಎಂದು ನಮ್ಮನ್ನು ವಿಶ್ವಾಸನೀಯವಾಗಿ ಒಪ್ಪಿ ತಿದ್ದಿದ ಎಲ್ಲರಿಗೂ ಸಂಪಾದಕೀಯ ಸಮಿತಿಯ ಪರವಾಗಿ ನಮ್ರ ನಮಸ್ಕಾರಗಳು.

ಶುರುವಾಗಿರುವ ಈ ಪುಟ್ಟ ಕನ್ನಡ ಸೇವೆಯ ಭಾಗ್ಯವು ನಿಮ್ಮೆಲ್ಲರ ಸಹಕಾರದಿಂದಲೇ ಮುಂದುವರಿಯಬೇಕು. ಸದಾ ನಮ್ಮೊಂದಿಗಿರಿ ಎಂಬುದಷ್ಟೇ ವಿನಮ್ರ ಬಿನ್ನಹ. ▪

ಐದು ವರುಷ

ನಮ್ಮನ್ನು ಕೈ ಹಿಡಿದು ನಡೆಸಿದ್ದೀರಿ.

ನಿಮಗಿದೋ ಹೃತ್ಪೂರ್ವಕ ವಂದನೆಗಳು

ಸಿಡ್ನಿಯ ಶಂಕರ ಸೇವಾ ಸಮಿತಿಯವರು ಶಂಕರ ತತ್ವದಲ್ಲಿ ಆಸಕ್ತಿಯಿರುವ ಜನರೊಡನೆ ನಡೆಸಿದ ಶಂಕರ ಜಯಂತಿಯು ಮಿಂಟೋ ಸಬರ್ಬ್ ನಲ್ಲಿರುವ ಶಿವಮಂದಿರದಲ್ಲಿ ಏಪ್ರಿಲ್ ೨೧ರಂದು ಸಾಂಗವಾಗಿ ನೆರವೇರಿತು. ಬೆಳಿಗ್ಗೆ ೮:೩೦ ರ ಹಾಗೆ ಭಕ್ತವೃಂದವು ಸಂಗಮಗೊಳ್ಳುತ್ತಲೇ, ದೇವಸ್ತಾನದ ಒಳಗೆ ಲಗುಬಗೆಯ ಸಂಚಲನ ಉಂಟಾಗಿ, ಆಸ್ತಿಕ ಕಳೆಯನ್ನು ತಂದುಕೊಟ್ಟಿತು. ಸಮಯಕ್ಕೆ ಸರಿಯಾಗಿ ಶುರುವಾದ ಶ್ರೀ ಗಣೇಶ ಪೂಜೆಯು, ಪೂಜಾ ಕೈಂಕರ್ಯಕ್ಕೆ ಇಂಬು ಕೊಟ್ಟು ನೆರೆದ ಜನಸ್ತೋಮವನ್ನು ಪೂಜೆಯ ಕಡೆಗೆ ಕೇಂದ್ರೀಕರಿಸಿತು.

ಲಘುನ್ಯಾಸ ಪೂರ್ವಕ ಷೋಡಶೋಪಚಾರ ಪೂಜೆಗೆ ಶ್ರೀಮತಿ ತ್ರಿವೇಣಿ ಮತ್ತು ಶ್ರೀ ನಾಗಶೈಲ ಅವರು ಎಲ್ಲರ ಪರವಾಗಿ ಪೂಜೆಗೆ ಕುಳಿತುಕೊಂಡು ಪುರೋಹಿತರಾದ ಶ್ರೀ ಅರುಣ ಶರ್ಮ ಅವರ ಮುಖೇನ ಸಂಕಲ್ಪ ವಿಧಿಯನ್ನು ಪೂರ್ಣಗೊಳಿಸಿದರು. ಸಿಡ್ನಿಯಲ್ಲಿರುವ ಅನೇಕ ಭಾರತೀಯರು ಪ್ರತೀವಾರ ವೇದ ಪಠನವನ್ನು ಅಭ್ಯಸಿಸುತ್ತಾರೆ. ಈ ಗುಂಪು ಪುರೋಹಿತರ ಜೊತೆಗೆ ರುದ್ರ, ಚಮಕ, ಇತರ ಸೂಕ್ತಗಳನ್ನು ಹೇಳಿ ಪಂಚಾಮೃತ ಅಭಿಷೇಕದ ಸಮಯದಲ್ಲಿ ಈಶ್ವರನಿಗೆ ಮಂತ್ರಘೋಷವನ್ನು ಸಮರ್ಪಿಸಿದರು. ನೆರದ ಜನರೆಲ್ಲರೂ ಕೂಡಿ, ಶ್ರೀ ಶಂಕರಾಚಾರ್ಯರು ರಚಿಸಿದ ಸ್ತೋತ್ರಗಳನ್ನು ಸಾಮೂಹಿಕವಾಗಿ ಹೇಳಿ ಆನಂದಿಸಿದರು.

ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ತಂದುಕೊಟ್ಟದ್ದು, ಸ್ಥಳೀಯ ಪ್ರತಿಭೆಯಾದ ಶ್ರೀ ಕೃಷ್ಣ ರಾಮರಥಿನಂ ಅವರ ಹಾಡುಗಾರಿಕೆ. ಇವರ ಮಂದ್ರ – ತಾರಕ ಸ್ಥಾಯಿಗಳಲ್ಲಿನ ಪ್ರಭುದ್ಧತೆ ಸಂಗೀತಾಸಕ್ತರನ್ನು ತಲೆದೂಗುವಂತೆ ಮಾಡಿ ಹಲವರ ಕಣ್ಣುಗಳಲ್ಲಿ ಅಶ್ರುಧಾರೆಯನ್ನೂ ಮೂಡಿಸಿತು. ಶಂಕರರ, ಕಂಚೆ ಕಾಮಕೋಟಿಗಳ ರಚನೆಗಳನ್ನು ಅವರು ನಿನಾದಗೈಯುತ್ತಿದ್ದಂತೆ ಪ್ರತಿಯೊಬ್ಬರ ಎದೆಯಲ್ಲೂ ಶಂಕರರು ಭೋಧಿಸುವ ಆಧ್ಯಾತ್ಮವನ್ನು ಸಂಗೀತದ ತಾದಾತ್ಮ್ಯವೇ ತೋರಿಸುಕೊಡುತ್ತಿದೆಯೋ ಏನೋ ಎನ್ನುವ ಅನುಭವವಾಗಿದ್ದರೆ ಅಚ್ಚರಿಯಿಲ್ಲ. ಅವರ ಹಾಡುಗಾರಿಕೆಗೆ ವಯಲಿನ್ ನ ಸಾಥ್ ನೀಡಿದವರು ಕೃಷ್ಣ ಅವರ ಪತ್ನಿಯಾದ ಶ್ರೀಮತಿ ಮಹತಿ ಅವರು.

ಶಂಕರ ಜಯಂತಿಗೆ ಕಳಶವಿಟ್ಟಂತೆ ಇದ್ದದ್ದು ಶ್ರೀ ಶತಾವಧಾನಿ ಆರ್ ಗಣೇಶ್ ಅವರ ಉಪನ್ಯಾಸದ ಧ್ವನಿಮುದ್ರಿಕೆ. ಈ ಕಾರ್ಯಕ್ರಮಕ್ಕೆಂದೇ ಶ್ರೀಮತಿ ಲಕ್ಷ್ಮೀ ಸೋಮಶೇಖರ್ ಅವರು ತರಿಸಿದ್ದ ಶ್ರೀಯುತ ಗಣೇಶ್‌ಅವರ ನುಡಿಗಳು, ಶಂಕರರು ಕೇವಲ ಭಕ್ತಿ ಪಂಥವನ್ನಷ್ಟೇ ಮುನ್ನಡೆಸಲಿಲ್ಲ, ಪ್ರತಿಯೊಬ್ಬರಲ್ಲೂ ಕವಿತಾ ವಾಙ್ಮಯತ್ವವನ್ನು ಹೇಗೆ ಪ್ರಚೋದಿಸಿದರು ಎಂದು ತಿಳಿಸಿಕೊಟ್ಟಿತು. ಜ್ಞಾನವನ್ನು ಪ್ರಚೋದಿಸಿದರೆ ಹೇಗೆ ಜನರನ್ನು ಒಗ್ಗೂಡಿಸಬಹುದು ಎನ್ನುವ ಅವರ ಕಾಳಜಿಯನ್ನು ತುಲನಾತ್ಮಕವಾಗಿ ವಿವರಿಸಿದರು. ಮತ್ತೆ ಮತ್ತೆ ಕೇಳಬೇಕೆನಿಸುವ ಅವರ ವಾಕ್ಪಟುತ್ವವನ್ನು ಕೇಳಿಯೇ ಸಂಭ್ರಮಿಸಬೇಕು.

ಮಹಾಮಂಗಳಾರತಿ ಮುಗಿದು ತೀರ್ಥ ಪ್ರಸಾದ ವಿನಿಯೋಗವಾದಮೇಲೆ ಶ್ರೀಮತಿ ರಾಜಲಕ್ಷ್ಮೀ ಮತ್ತು ಶ್ರೀ ಕನಕಾಪುರ ನಾರಾಯಣ ಅವರ ನೇತೃತ್ವದಲ್ಲಿ ಸಿದ್ಧಪಡಿಸಿದ ಷಡ್ರಸೋಪೇತ ಭಕ್ಷ್ಯ ಭೋಜ್ಯಗಳು ನೆರೆದ ಜನಸಮೂಹದ ಹಸಿವನ್ನು ಇಂಗಿಸಲು ಉದರವನ್ನು ಸೇರಿ ತತ್ವಮಸಿ ತತ್ವಮಸಿ ಎನ್ನುತ್ತ ಶಂಕರರ ತತ್ವ ಪ್ರಚೋದನೆಯನ್ನು ಮಾಡಿದ್ದರಲ್ಲಿ ಸಂಶಯವಿಲ್ಲ. ಭಾರತದಿಂದ ಬಲು ದೂರದ ಆಸ್ಟ್ರೇಲಿಯದಲ್ಲಿಯೂ ಶಂಕರರ ನೆನಪನ್ನು ಮಾಡುತ್ತಿರುವ ಶಂಕರ ಸೇವಾ ಸಮಿತಿಗೆ ಮೆಚ್ಚುಗೆಯನ್ನು ಸಲ್ಲಿಸಲೇಬೇಕು. "ತನ್ನನ್ನು ತಾನು" ಅರಿತುಕೊಳ್ಳಲು ಸಹಾಯ ಮಾಡುವ ಶಂಕರರ ಸಂದೇಶಗಳನ್ನು ಪೂಜೆಯ ಜೊತೆಗೆ ಸೂಕ್ತವಾದ ಸಂವಾದ, ಉಪನ್ಯಾಸ, ಚರ್ಚೆಗಳ ಮೂಲಕ ಈಗಿನ ಮತ್ತು ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ಏರ್ಪಡಿಸಿದರೆ ಶಂಕರ ಜಯಂತಿಯ ಆಚರಣೆಯು ಹೆಚ್ಚು ಔಚಿತ್ಯಪೂರ್ಣವಾಗಿರುತ್ತದೆಯೆಂಬ ಸತ್ಚಿಂತನೆಯನ್ನು ಈ ವರದಿಯ ಮೂಲಕ ವಿನಮ್ರನಾಗಿ ಮಾಡುತ್ತಿರುವೆ.▪

ರಂಗೋತ್ಸವ ೨೦೧೮, ಇಡೀ ದಿನ ನಾಟಕ ಕಲೆಗೆಂದೇ ಮುಡಿಪು ಎಂದಾಗ ಎಲ್ಲೊ ಬೆಂಗಳೂರು, ಮೈಸೂರಿನ ಕಲಾಕ್ಷೇತ್ರದಲ್ಲೋ, ರಂಗಶಂಕರದಲ್ಲೋ ಇರಬಹುದು ಎಂದುಕೊಳ್ಳುತ್ತ ನೋಡಿದರೆ ಆ ರಂಗೋತ್ಸವ ಬೇರೆಲ್ಲೂ ಅಲ್ಲ , ಸಿಡ್ನಿಯ ಬ್ರಾನ್ ಬ್ರೌನ್ ರಂಗಮಂದಿರದಲ್ಲಿ ಭಾನುವಾರ ಏಪ್ರಿಲ್ ೨೯ ಕ್ಕೆ ಎಂದು ತಿಳಿದು ಹರ್ಷ , ಕುತೂಹಲ ಎರಡೂ ಒಟ್ಟಿಗೆ ಉಂಟಾಯ್ತು !

ಯಾರಪ್ಪ ಇಡೀ ದಿನದ ಕನ್ನಡ ಕಾರ್ಯಕ್ರಮ ಹಚ್ಚಿಕೊಳ್ಳುವ ಸಾಹಸಿಗಳು ಎಂದು ಯೋಚಿಸಿದಾಗ ಮೊದಲು ನೆನಪಿಗೆ ಬಂದದ್ದೇ ಅನಿವಾಸಿ ಕಲಾ ತಂಡದ ಹೆಸರು. ಪ್ರತಿಭಾವಂತ ದಂಪತಿ ಸುದರ್ಶನ್ ಹಾಗೂ ವೀಣಾ ಸುದರ್ಶನ್ ಅವರು ಕಟ್ಟಿ ಬೆಳೆಸಿರುವ ಸಂಸ್ಥೆ ಅನಿವಾಸಿ ತಂಡ ಸಿಡ್ನಿಯ ಕನ್ನಡ ನಾಟಕ, ಸಿನಿಮಾ,ಸಂಗೀತ ಹಾಗೂ ಸಾಹಿತ್ಯದ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದೆ.ಹೊಸ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕನ್ನಡದ ವಾತಾವರಣದಲ್ಲಿ ಲವಲವಿಕೆ ಮೂಡಿಸಿದೆ.

೨೦೧೮ ರಂಗೋತ್ಸವವನ್ನು ಖ್ಯಾತ ರಂಗ ಕಲಾವಿದೆ , ನಿರ್ದೇಶಕಿ ಶ್ರೀಮತಿ ಬಿ ಜಯಶ್ರೀ ಅವರಿಗೆ ಮುಡಿಪ್ಪಿಟ್ಟ ಕಾರ್ಯಾಕ್ರಮವಾಗಿತ್ತು. ದಿನದ ಮೊದಲ ಭಾಗದಲ್ಲಿ ಜಯಶ್ರೀ ಅವರ ಪರಿಚಯ ಮಾಡಿಕೊಡ್ಡುತ್ತ ಅವರೊಡನೆ ವೀಣಾ ಸುದರ್ಶನ್ ಸಂದರ್ಶನ ನಡೆಸಿಕೊಟ್ಟರು. ಜಯಶ್ರೀ ಅವರು ಗುಬ್ಬಿ ವೀರಣ್ಣನವರ ಮೊಮ್ಮಗಳು, ತಾಯಿ ಹಾಲಿನ ಜೊತೆ ರಂಗಕಲೆಯನ್ನು ಅರಗಿಸಿಕೊಂಡು ರಂಗಮಂಚದ ಮೇಲೇ ಬೆಳೆದವರು. ತಮ್ಮ ಅನುಭವಗಳನ್ನು ಬಹಳ ಆತ್ಮೀಯವಾಗಿ, ದಿಟ್ಟವಾಗಿ, ಕೇಳುಗರೊಡನೆ ಹಂಚಿಕೊಂಡರು.

ಮಧ್ಯಾಹ್ನದ ಊಟದ ನಂತರ ಬೆಚ್ಚಗೆ 'ಕೌಧಿ' ಹೊದ್ದು ಕೂತಾಗ ಆದ ಖುಷಿಯ ಅನುಭವವೇ ಬೇರೆ! ಕೌಧಿ' ಶ್ರೀಮತಿ ಬಿ ಜಯಶ್ರೀಯವರು ಅಭಿನಯಿಸಿರುವ ಒಂದು ಪ್ರಬುದ್ಧ ಚಿತ್ರ. ಒಬ್ಬ ಅನಕ್ಷರಸ್ಥೆ ಹಳ್ಳಿಯ ಬಡ ಹೆಣ್ಣುಮಗಳೊಬ್ಬಳ ಹೃದಯ ವೈಶಾಲ್ಯ, ಅವಳ ಸಂಸ್ಕಾರ, ಅವಳ ಜೀವನ, ಅವಳ ಅಂತಃಶಕ್ತಿ, ಅವಳ ಕಲಾವಂತಿಕೆಯನ್ನು ಸೊಗಸಾಗಿ ಬಿಂಬಿಸಿದ್ದಾರೆ ಜಯಶ್ರೀ. ಎಲ್ಲರೂ ನೋಡಲೇಬೇಕಾದ ಅಪರೂಪದ ಚಿತ್ರ.

ರಂಗದ ಮೇಲಿನ ಬೆಳಕಿನ ಹೊಳಪಿನಲ್ಲಿ ಜಗಜಗ ಎಂದು ಕಾಣುವ ಬದುಕಿಗೂ ರಂಗ ಕಲಾವಿದರ ಬದುಕಿನ ನೈಜತೆಗೂ ಇರುವ ಅಂತರವನ್ನು ತಮ್ಮ ಬದುಕಿನ ಹಿನ್ನೆಲೆಯಲ್ಲಿ ವಿವರಿಸಿದರು. ಸಂಜೆಯಾಗುತ್ತಿದಂತೆ ಆಡಿಟೋರಿಯಂನಲ್ಲಿ ಜನ ಹೆಚ್ಚಾಗುತ್ತಿದಂತೆ, ಹೊಸ ಚೇತನ ,ಹೊಸ ಚಟುವಟಿಕೆ ಕಾಣತೊಡಗಿತ್ತು. ಕರಿಮಾಯಿ ನಾಟಕದ ಚುಂಬಕ ಶಕ್ತಿ , ಎಲ್ಲೆಡೆ ತುಂಬ ತೊಡಗಿತು. ಕರಗದ ಚುರುಕು ಗತಿಗೆ ಕರಿಮಾಯಿ ನಾಟಕ ಶುರುವಾಯ್ತು. ಸಂಗೀತವೇ ಅವರ ನಾಟಕಗಳ ಜೀವಾಳ. ಜನರ ಕೋರಿಕೆಗೆ ಬೆಲೆ ಕೊಟ್ಟು ಜಯಶ್ರೀಅವರು ತಮ್ಮ ಹಾಡಿನೊಂದಿಗೆ ತಮ್ಮ ಸಂವಾದವನ್ನು ಮುಗಿಸಿದರು. ಜಯಶ್ರೀಯವರ ಆತ್ಮಕಥನ 'ಕಣ್ಣಾ ಮುಚ್ಚೆ ಕಾಡೇ ಗೋಡೆ' ಪುಸ್ತಕಕ್ಕೆ ಅವರೇ ಸಹಿ ಹಾಕಿ ಕೊಟ್ಟಾಗ ಅದು ಬಿಸಿ ಬಿಸಿ ಪಕೋಡದ ಹಾಗೆ ಖರ್ಚಾಗಿ ಹೋಯ್ತು .

ಸಂಜೆಯಾಗುತ್ತಿದಂತೆ ಆಡಿಟೋರಿಯಂನಲ್ಲಿ ಜನ ಹೆಚ್ಚಾಗುತ್ತಿದಂತೆ, ಹೊಸ ಚೇತನ ,ಹೊಸ ಚಟುವಟಿಕೆ ಕಾಣತೊಡಗಿತ್ತು. ಕರಿಮಾಯಿ ನಾಟಕದ ಚುಂಬಕ ಶಕ್ತಿ , ಎಲ್ಲೆಡೆ ತುಂಬ ತೊಡಗಿತು. ಕರಗದ ಚುರುಕು ಗತಿಗೆ ಕರಿಮಾಯಿ ನಾಟಕ ಶುರುವಾಯ್ತು. ಮೊದಲ ದೃಶ್ಯದಲ್ಲೇ ಕೊಲೆ ಮಾಡಿ , ನಡುಗುತ್ತ ನಿಂತ ನಿಂಗು ಪಾತ್ರದಲ್ಲಿ ವೀಣಾ ಸುದರ್ಶನ ಎಲ್ಲರನ್ನೂ ಮಂತ್ರ ಹಾಕ್ದಂತೆ ಕಟ್ಟಿ ಹಾಕಿ ಬಿಟ್ಟರು. ಇಡೀ ನಾಟಕದುದ್ದಕ್ಕೂ ನಿಂಗುವಿನ ಪಾತ್ರ ಬೆಳೆಯುತ್ತಲೇ ಬಂತು. ನಿಂಗುವಿನ ಅಮೋಘ ಅಭಿನಯಕ್ಕೆ ಸರಿ ಸಾಟಿಯಾಗಿತ್ತು, ಶಾಮಸಿಂಗರ ಊರ ಗೌಡನ ಪಾತ್ರ. ಹಳ್ಳಿಯ ನಂಬಿಕೆಗಳ, ಪರಂಪರೆಯ ವಿನಾಶಕ್ಕೆ ಮೂಕ ಸಾಕ್ಷಿಯಾಗಿ ನಿಲ್ಲುತ್ತಾಳೆ ಗ್ರಾಮದೇವತೆ ಕರಿಮಾಯಿ. ಚಿಮಣಾ ಪಾತ್ರದಲ್ಲಿ ಸುನೀತಾ ತಂದ ಎನರ್ಜಿ ಹಾಗೂ ನಾಗಶಯನ ಅವರ ಗಾಂಭೀರ್ಯ ನಾಟಕದಲ್ಲಿ ಒಂದು ಹದವನ್ನು ಹಿಡಿದಿಡಲು ಸಹಾಯವಾಯ್ತು. ಸೂತ್ರಧಾರನ ಪಾತ್ರ ಸಹ ಕಳೆ ಕೊಟ್ಟಿತು.

ತಾಯೇ ಎಂದು ತಾರಕಕ್ಕೆ ಏಳುವ ಮೇಳದ ಧ್ವನಿಯೇ ಈ ಬಯಲಾಟದ ಮಾದರಿಯ ನಾಟಕದ ಜೀವಾಳ. ಅಪರ್ಣ ನಾಗಶಯನ , ರೇಖಾ ಶಶಿಕಾಂತ್ ಹಾಗೂ ಹೇಮಾ ಸುಧಾಕರ್ ಹಾಗೂ ವಾದ್ಯವೃಂದ ನಾಟಕಕ್ಕೆ ಜೀವ ತುಂಬಿದರು. ಜಯಶ್ರೀ ಅವರ ಗರಡಿಯ ತಾಲೀಮು ಪ್ರತಿ ಹಾಡಿನಲ್ಲೂ ಎತ್ತಿ ತೋರುತ್ತಿತ್ತು! ರಂಗ ಸಜ್ಜಿಕೆ , ವೇಷ ಭೂಷಣ ಎಲ್ಲ ಮೂಲ ನಾಟಕದಂತೆ ಇದ್ದು, ಒಂದು ಹಳ್ಳಿಯ ಚಿತ್ರ ಸುಲಭವಾಗಿ ಕಟ್ಟಿತ್ತು.

ವಿದ್ಯಾವಂತ ಲಾಯರ್ ಗುಡಿಸ್ಕಾರನ ಪಾತ್ರದಲ್ಲಿ ಸುದರ್ಶನ್ ಅವರಿಂದ ಹೆಚ್ಚಿನ ನಿರೀಕ್ಷೆ ಇತ್ತು, ಅವರ ಪ್ರತಿಭೆ ಬಲ್ಲ ಎಲ್ಲರಿಗೂ. ಬಹುಶ ಶ್ರೀಮತಿ ಬಿ ಜಯಶ್ರೀ ಹಾಗೂ ಅವರ ಪತಿ ಆನಂದರಾಜು ಅವರನ್ನು ಒಪ್ಪಿಸಿ ಸಿಡ್ನಿಗೆ ಕರೆತಂದು , ಒಂದೇ ಒಂದು ತಿಂಗಳಿನಲ್ಲಿ ಈ ದೊಡ್ಡ ಊರು ಸಿಡ್ನಿಯ ತುಂಬ ಹರಡಿರುವ ಕನ್ನಡ ನಾಟಕಪ್ರಿಯರನ್ನು ಕಲೆಹಾಕಿ, ೪೦ ಜನ ಕಲಾವಿದರಿಗೆ ಹೊಂದುವ ಹಾಗೆ ಪ್ರತಿ ವಾರವೂ ತಾಲೀಮಿಗೆ ಏರ್ಪಾಡು ಮಾಡಿ, ವೇಷ ಭೂಷಗಳ ಸಿದ್ಧತೆ ಮಾಡಿ, ಬಿಂಕದಿಂದ ದೂರ ನಿಲ್ಲುವ ಕನ್ನಡಿಗರ ಮನ ಒಲಿಸಿ , ಟಿಕೆಟ್ ಮಾರಿ ಬಹುಶ ಸುದರ್ಶನ್ ದಣಿದು ಬಿಟ್ಟಿದರೇನೋ ರಂಗ ಮಂಚ ಏರುವ ಹೊತ್ತಿಗೆ !!

ಇಂತಹ ರಂಗ ನಿಷ್ಠೆಗೆ , ಕ್ರಿಯಾಶೀಲತೆಗೆ, ಇಂತಹ ಪ್ರತಿಭೆಗೆ ನಾವಿನ್ನೂ ಹೆಚ್ಚಿನ ಆದರ, ಅಭಿಮಾನ ತೋರಿ ಉತ್ಸಾಹದಿಂದ ಭಾಗವಹಿಸಿ ರಂಗೋತ್ಸವದ ರಂಗನ್ನು ಹೆಚ್ಚಿಸಿ, ಹರ್ಷಿಸ ಬಹುದೇನೋ ! ಅದನ್ನು ಮುಂದಿನ ರಂಗೋತ್ಸವದಲ್ಲಿ ನಿರೀಕ್ಷಿಸೋಣವೇ?▪



ಗಾಳಿಮಣ್ಣುಂಡೆಯೊಳಹೊಕ್ಕು ಹೊರಹೊರಳದು |
ಆಳೆನಿಪುದಂತಾಗದಿರೆ ಬರಿಯ ಹೆಂಟೆ ||
ಬಾಳೇನು ಧೂಳು ಸುಳಿ,ಮರ ತಿಕ್ಕಿದುರಿಯ ಹೊಗೆ |
ಕ್ಷೇಳವೇನಮೃತವೇಂ?-ಮಂಕುತಿಮ್ಮ ||

ಮಣ್ಣುಂಡೆಯೊಳಹೊಕ್ಕು=ಮಣ್ಣ+ಉಂಡೆ+ಒಳ+ಹೊಕ್ಕು, ಹೊರಹೊರಳದು=ಹೊರ+ಹೊರಳದು
ಆಳೆನಿಪುದಂತಾಗದಿರೆ=ಆಳು+ಎನಿಪುದು+ಅಂತೆ+ಆಗದಿರೆ, ತಿಕ್ಕಿದುರಿಯ=ತಿಕ್ಕಿದ+ಉರಿಯ,
ಕ್ಷೇಳವೇನಮೃತವೇಂ=ಕ್ಷೇಳವೇನು+ಅಮೃತವೇನು. ಕ್ಷೇಳ=ವಿಷ.

ಈ ದೇಹವನ್ನುಮಣ್ಣುಂಡೆಗೆ ಹೋಲಿಸಿದ್ದಾರೆಮತ್ತು ಈ ದೇಹದಲ್ಲಿ ಆಡುವ ಉಸಿರು (ಗಾಳಿ) ಆಡುತ್ತಿದ್ದರೆ ನಾವುಗಳು "ಆಳು" ಎಂದು ಎನ್ನಿಸಿಕೊಳ್ಳುತ್ತೇವೆ. ಇಲ್ಲದಿದ್ದರೆ ಈ ದೇಹ ಬರೀಮಣ್ಣಿನ ಹೆಂಟೆ ಎಂದು ಒಂದು ಅತ್ಯುತ್ತಮ ಸತ್ಯವನ್ನು ಪ್ರತಿಪಾದಿಸುತ್ತಾರೆ. "ಬಡಿತ ನಿಂತರೆ ಬಡಿವಾರ ಬಂದ್" ಅಲ್ಲವೇ?. ಇರಲಿ ಗುಂಡಪ್ಪನವರು ಈ ಬಾಳನ್ನು ಧೂಳ ಸುಳಿ ಎಂದು ಕರೆಯುತ್ತಾರೆ. ಇದು ಬಹಳ ಸೂಕ್ತವಾಗಿದೆ.

ನಾನು ಹಿಂದೆ ಒವ್ಮೆ ಈ ಬ್ರಹ್ಮಾಂಡದ ವಿವರಣೆಯನ್ನು ಮಾಡುವಾಗ, ಇಡೀ ಬ್ರಹ್ಮಾಂಡವು ಎಷ್ಟು ದೊಡ್ಡದೆಂದರೆ, ಇದರೆದುರು ನಾವು ಒಂದು ಧೂಳ ಕಣವೂ ಅಲ್ಲ ಎಂದು ಹೇಳಿದ್ದೆ. ಈಗಮಣ್ಣಿಂದ ಆದ ಮತ್ತು ಈ ಸಮಸ್ತ ಭೂಮಂಡಲವನ್ನು ನಿವಾಸಸ್ಥಾನವನ್ನಾಗಿಸಿಕೊಂಡ ಪ್ರಾಣಿಗಳೆಲ್ಲವೂ ಧೂಳ ಕಣಗಳೇ ಎಂದು ಗುಂಡಪ್ಪನವರು ಹೇಳುತ್ತಾರೆ.ಮಣ್ಣಿಂದ ಆದ ಜೀವಕಣಗಳು ಮತ್ತು ಈ ಜೀವಕಣಗಳಿಂದಾದ ಈ ದೇಹವೂ ಮಣ್ಣಲ್ಲವೇ? "ಮಣ್ಣಿಂದ ಕಾಯಮಣ್ಣಿಂದ" ಎಂದು ನಾವು ಕೇಳಿಲ್ಲವೇ? ಹಾಗೆ ಮಣ್ಣಿಂದ ಆದ ಈ ದೇಹವನ್ನು ಮಣ್ಣ ಉಂಡೆ ಎಂದು ಹೇಳಿದ್ದಾರೆ. ಈ ಮಣ್ಣ ಉಂಡೆಯಲಿ ಗಾಳಿ ಆಡುತ್ತಿದ್ದರೆ ನಾವೂ ಸಹ "ಆಳು" ಅಂದರೆ ಮನುಷ್ಯ ಎಂದು ಕರೆಯಲ್ಪಡುತ್ತೇವೆ. ಇಲ್ಲದಿದ್ದರೆ ಬರೇ ಮಣ್ಣ ಉಂಡೆ. ಆಗ ನಮ್ಮನ್ನು ಹೆಣ ಎನ್ನುತ್ತಾರೆ.

ಹಾಗಿದ್ದರೆ, ಈ ಬಾಳು ಅಂದರೆ ಜೀವನವು ಏನು? ಎಂದರೆ ಮಣ್ಣ ಕಣಗಳ ತಿಕ್ಕಾಟವೆನ್ನುತ್ತಾರೆ ಶ್ರೀ ಗುಂಡಪ್ಪನವರು. ಮಣ್ಣು ಉಂಡೆಗಳಾದ ಮಾನವರ ಪರಸ್ಪರ ಈ ತಿಕ್ಕಾಟದಲ್ಲಿ ಬೆಂಕಿ ಉಂಟಾಗುತ್ತದೆ ಮತ್ತು ಹೊಗೆಯಾಡುತ್ತದೆ. ದ್ವೇಷದ ಬೆಂಕಿ, ಅಸೂಯೆಯ ಬೆಂಕಿ, ಕೋಪದ ಬೆಂಕಿ ಹೀಗೆ ಹಲವಾರು ವಿಧದಲ್ಲಿ ಮನುಜಮನುಜರ ಮಧ್ಯೆ ಉಂಟಾಗುವ ತಿಕ್ಕಾಟದಿಂದ ಹತ್ತಿಕೊಳ್ಳುತ್ತದೆ ಬೆಂಕಿ. ಆ ತಿಕ್ಕಾಟದ ಪರಿಣಾಮ ಸಾವು ನೋವುಗಳ ಪರಿಣಾಮವೇ ಬೆಂಕಿಯಿಂದ ಬರುವ ಹೊಗೆ. ಇದರಿಂದ ಕೆಲವರಿಗೆ ಸುಖ ಕೆಲವರಿಗೆ ದುಃಖ. ಇದನ್ನೇ "ಕ್ಷೇಳ" ಅಂದರೆ ವಿಷವೆಂದು, ಸುಖ ಮತ್ತು ಆನಂದವನ್ನು "ಅಮೃತ"ವೆಂದೂ ಕರೆಯುತ್ತಾರೆ ಗುಂಡಪ್ಪನವರು.

ಪರಮಾತ್ಮನೆಂಬಮಹಾಜ್ವಾಲೆಯಲ್ಲಿ ಉರಿಯುವ ಬೆಂಕಿಯಿಂದ ಸಿಡಿದ ಕೋಟ್ಯಾಂತರ ಕಿಡಿಗಳೇ, ಈ ಜೀವಿಗಳು. ಈ ಜಗತ್ತಿನಲ್ಲಿ, ಮಣ್ಣಿನ ಉಂಡೆಗಳಂತೆ ಇರುವ ನಾವೂ ಮತ್ತು ಈ ಉಂಡೆಯೊಳಗೆ ಗಾಳಿ ಎಂಬಂತೆ ಇರುವ ಆತ್ಮ ಅಥವಾ ಚೇತನದ ಸಮ್ಮಿಲನದಿಂದ ಉಂಟಾದ ಬದುಕೆಂಬ ತಿಕ್ಕಾಟದಲ್ಲಿ ಬೆಂಕಿಯುಗುಳಿ, ವಿಷಕಾರಿ, ಅಮೃತವ ಸವಿದು ಬಾಳ ಸವೆಸಿಮತ್ತದೇ ಚೇತನವನ್ನು ಸೇರುವಾಗ, ಇಲ್ಲಿ ಪಡೆದ ಅಮೃತದ ಬೆಲೆಯೇನು? ಕುಡಿದ ಅಥವಾ ಕಕ್ಕಿದ ವಿಷದ ಬೆಲೆಯೇನು? ಎಂದು ಕೇಳುತ್ತಾರೆ ಶ್ರೀ ಗುಂಡಪ್ಪನವರು.

ಈ ಮುಕ್ತಕದ ಒಟ್ಟಾರೆ ಆಂತರ್ಯವೇನೆಂದರೆ, ಮಣ್ಣಿಂದ ಆಗಿ, ಮಣಲ್ಲೇ ಇದ್ದು ಮಣಲ್ಲೇ ಸೇರುವ ಈ ಮಾನವನ ಬಾಳು ಕೇವಲ ಉಸಿರಿರುವ ತನಕ. ಹೀಗೆ ಬದುಕಿರುವಾಗ ನಾವು ಪಡೆಯುವ ಸುಖ ದುಃಖ, ಅನುಭವಿಸುವ, ಕೋಪ ದ್ವೇಷ, ಅಸೂಯೆ, ಪ್ರೀತಿ, ಪ್ರೇಮ, ಅನುರಾಗ, ಬಂಧನಗಳಂಥಹ ಭಾವಗಳೆಲ್ಲವೂ, ಬಡಿತವಿರುವತನಕ (ಹೃದಯದ) ಅದು ನಿಂತರೆ "ಬಡಿವಾರ ಬಂದ್." ಈ ಜೀವನದ ಎಲ್ಲಕ್ಕೂ ಒಂದು ಮಂಗಳವನ್ನು ಹಾಡುವ, ಸಾವನ್ನು ಅಪ್ಪಿ ಎಲ್ಲವನ್ನೂ ಅಲ್ಲೇ ಬಿಟ್ಟು ಹೋಗುವಾಗುವಂಥಾ ಈ ಜೀವನದಲ್ಲಿ ಪಡೆದ ಸುಖಕ್ಕೆ ಏನು ಬೆಲೆ, ದುಃಖಕ್ಕೆ ಏನು ಬೆಲೆ? ಎಲ್ಲವೂ ಶೂನ್ಯ.

ಇಂತಹ ಭಾವಗಳನ್ನು ವ್ಯಕ್ತಪಡಿಸುವ ಈ ಮುಕ್ತಕದ ಆಂತರ್ಯವನ್ನು ವಾಚಕರು ಅವರದೇ ಅನುಭವದ ಮೂಸೆಯಲ್ಲಿ ಹಾಕಿ ನೋಡಿದಾಗ, ಪ್ರತಿಯೊಬ್ಬರಿಗೂ ಅವರವರದೇ ಅನುಭವದ ಭಾವ ಸಿಗುತ್ತದೆ. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಮಾರ್ಗರೇಟಳ ಮಾರ್ಕೆಟಿಂಗ್ ಯಾನ

ಗಿರಿಯಪ್ಪ ನಿಂತಿದ್ದ. ಮಾರ್ಗರೇಟ್ ಧಾವಿಸಿದಳು. ಗಿರಿಯಪ್ಪನ ಕಣ್ಣಿಗೆ ಅವಳು ಹಬ್ಬ; ಮಾರ್ಗರೇಟ್ ಮಾರುವ ವಸ್ತುಗಳಿಗೆ ಇವನು ಸಂಭಾವ್ಯ ಕುರಿ. ಇದೋ ಗಿರಾಕಿ ಗಿರಿಯಪ್ಪನವರ ಮೇಲೆ ಮಾರಾಟದ ಮಾರ್ಗರೇಟ್‌ನ ಸ್ಪೆಷಲ್ ಎಕ್ಸ್‌ಪೆರಿಮೆಂಟ್.....

ಮಾ: ಗುಡ್ ಈವನಿಂಗ್ ಸರ್.... ಮೇ ಐ ಸ್ಪೀಕ್ ಟು ಯೂ ಫಾರ್ ಎ ಮಿನಿಟ್?

ಗಿ: (ತಬ್ಬಿಬ್ಬಾಗಿ) ಯಾ... ಯಾರು? ನಾನಾ? ನನ್ನ ಜೊತೇನಾ? (ಸ್ವಗತ) ವಾಟ್ ಎ ಲವ್ಲಿ ಗರ್ಲ್. ನನ್ನ ಹತ್ರ ಮಾತಾಡಕ್ಕೆ ಪರ್ಮಿಷನ್ ಬೇರೆ ಕೇಳ್ತಿದಾಳೆ. ಪ್ರಧಾನಿಗಳು ಹೇಳಿದ ಅಚ್ಛೇ ದಿನ್ ಬಂದೇಬಿಡ್ತು ಅನ್ಸತ್ತೆ. (ಪ್ರಕಾಶ) ಎಸ್.... ವಾಟ್ ಕ್ಯಾನ್ ಐ ಡೂ ಫಾರ್ ಯೂ ಮಿಸ್.....

ಮಾ: ಮಿಸ್ ಮಾರ್ಗ್ರೇಟ್....

ಗಿ: ಮಾರ್ಗ್ರೇಟ್... ನೈಸ್ ನೇಮ್...

ಮಾ: ಅದು ನನ್ನ ನಿಕ್‌ನೇಮ್ ಸರ್... ನೇಮ್ ಬೇರೇನೇ ಇದೆ. ನಾನು ಐಟಂಸ್

ಗಿ: ಐಟಂ ಸಾಂಗ್ ಗಳಲ್ಲಿ ಪಾರ್ಟ್ ಮಾಡಿದೀರಾ?

ಮಾ: ಯೂ ನಾಟಿ... ಅಲ್ಲ ಸಾರ್... ಐಟಂಸ್ ಮಾರೋದ್ರಲ್ಲಿ ಗ್ರೇಟ್ ಆದ್ದರಿಂದ ನನ್ನ ಕೊಲೀಗ್ಸೆಲ್ಲ ನನ್ನನ್ನ ಮಾರ್ಗ್ರೇಟ್ ಅಂತ ಕೂಗ್ತಾರೆ... ನಾನು ಉತ್ತರಕುಮಾರ್ ಮೆನ್ಸ್ ಪ್ರಾಡಕ್ಟ್ಸ್ ಕಂಪನಿಯಿಂದ ಬಂದಿದೀನಿ. (ಮೋಹಕವಾಗಿ) ನನಗೋಸ್ಕರ ಒಂದೆರಡು ನಿಮಿಷ ಸ್ಪೇರ್ ಮಾಡ್ತೀರಾ ಸಾರ್....

ಗಿ: (ಹಿಗ್ಗಿನಿಂದ) ಶೂರ್. ವೈ ನಾಟ್...

ಮಾ: (ತನ್ನ ಬ್ಯಾಗಿನ್ನು ಕೆಳಗಿಟ್ಟು, ಝಿಪ್ ತೆರೆದು ಒಂದು ಕಾರ್ಡನ್ನು ಹಿಡಿದು) ಸರ್, ಇದು ನಮ್ಮ ಕಂಪನಿ ನೀಡುತ್ತಿರುವ ಹೊಸ ಸ್ಕ್ಯಾಚ್ ಕಾರ್ಡ್....

ಗಿ: ಓಹ್. ಸೂಪರ್. ನನ್ನ ಅದೃಷ್ಟ ನೋಡೇಬಿಡ್ತೀನಿ. (ಕಾರ್ಡ್ ಕೈಗೆ ತೆಗೆದುಕೊಂಡು) ಇದೇನಿದು? ಫುಲ್ ಬ್ಲ್ಯಾಂಕ್ ಆಗಿದೆ. ಎಲ್ಲಿ ಸ್ಕ್ಯಾಚ್ ಮಾಡ್ಬೇಕು?

ಮಾ: ಓಹ್! ಆ ತರಹದ ಸ್ಕ್ಯಾಚ್ ಕಾರ್ಡ್ ಅಲ್ಲ ಸಾರ್... (ಕಾರ್ಡನ್ನು ಕೈಯಲ್ಲಿ ತೆಗೆದುಕೊಂಡು) ನೋಡಿ, ಈ ಕಾರ್ಡನ್ನ ಹೀಗೆ ಹಿಡ್ಕೊಳ್ಳೋದು... ಮೂಗಿನ ತುದೀನೋ, ಕಿವಿಯ ತುದೀನೋ, ಕೆನ್ನೆಯೋ, ಅಂತೂ ಎಲ್ಲಿ ನವೆ ಆಗತ್ತೋ ಅಲ್ಲಿ.... ಹೀ ..... ಗೆ..... ನಿಧಾನವಾಗಿ ಕೆರೆದುಕೊಂಡರೆ.... ಶೀಘ್ರದಲ್ಲೇ ನವೆಯಿಂದ ಉಪಶಮನ.... (ಒಯ್ಯಾರದಿಂದ) ತೊಗೊಳಿ ಸಾರ್... ಡಜನ್ ಫಿಫ್ಟಿ ರುಪೀಸ್ ಅಷ್ಟೇ....

ಗಿ: (ತಲೆ ಆಡಿಸುತ್ತಾ) ಅದಕ್ಕೆ ನನ್ನದೇ ಬೆರಳಿನ ನನ್ನದೇ ಉಗುರು ಇದೆಯಲ್ಲ, ಕಾರ್ಡ್ ಯಾಕೆ ಬೇಕು...

ಮಾ: ಛಿ! ಅದೆಲ್ಲ ಹಳೆ ಕಾಲದವರು ಮಾಡೋ ಕೆಲಸ ಸಾರ್... ಈ ಕಾರ್ಡ್ ತುದಿಗೆ ಆಂಟಿ ಇಂಫೆಕ್ಷನ್ ಜೆಲ್ ಹಚ್ಚಿದೀವಿ ಸಾರ್... ಸೋ ಉಗುರು ಬಳಸಿದಾಗ ನೇಯ್ಲ್ ಇಂಫೆಕ್ಷನ್ ಆಗೋದು ತಪ್ಪತ್ತೆ; ಕೆರೆದುಕೊಂಡರೂ ಮಾರ್ಕ್ ಉಳಿಯೋಲ್ಲ; ಯೂಸ್ & ಥ್ರೋ ಆದ್ದರಿಂದ ವೆರಿ ಸೇಫ್ ಸಾರ್....

ಗಿ: ಸ್ಸಾರಿ... ನನ್ನ ಹತ್ತಿರ ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್, ರೇಷನ್ ಕಾರ್ಡ್, ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಆರ್ಸಿ ಕಾರ್ಡ್, ಇಷ್ಟೊಂದು ಕಾರ್ಡ್ ಇರೋದ್ರಿಂದ ಈ ಕಾರ್ಡ್ ಇಟ್ಕೊಳಕ್ಕೆ ಜಾಗ ಇಲ್ಲ. ಬೇರೆ ಏನಾದ್ರೂ ಪ್ರಾಡಕ್ಟ್ ಇದ್ರೆ ನೋಡೋಣ...

ಮಾ: ಶೂರ್ ಸಾರ್... ಇದೋ ನೋಡಿ ಸಾರ್ (ಒಂದು ಟ್ಯೂಬ್ ತೆಗೆಯುತ್ತಾ) ಸ್ಪೆಷಲ್ ಕ್ವಾಲಿಟಿ ಎಂಎಸ್ ಲಿಪ್‌ಸ್ಟಿಕ್.... ಫಾರ್ ಮ್ಯಾರೀಡ್ ಮೆನ್ ಓನ್ಲೀ...



ಗಿ: ಗಂಡಸರಿಗೆ ಲಿಪ್‌ಸ್ಟಿಕ್ಕಾ? ಯಾಕೆ?

ಮಾ: ಓಲ್ಡನ್ ಡೇಸ್‌ಗೆ ಕಂಪೇರ್ ಮಾಡಿದರೆ ಈಗೆಲ್ಲ ಡಿವೋರ್ಸ್‌ಗಳು ತುಂಬಾ ಆಗ್ತಿದೆ ಸಾರ್..

ಗಿ: ನಿಜ. ಆದರೆ ಅದಕ್ಕೂ ಲಿಪ್‌ಸ್ಟಿಕ್‌ಗೂ ಏನು ಸಂಬಂಧ?

ಮಾ: ಗಂಡನಿಗೆ ಹೆಂಡತಿ ಹೇಳಿದ ಮಾತು ಸರಿಬರದಿದ್ದಾಗಲೆಲ್ಲಾ ಗಂಡ ಈ ಟ್ಯೂಬ್ ಹೀಗೆ ತೆಗೆದು... ಎಲ್ಲಿ, ನಿಮ್ಮ ಕೈ ಕೊಡಿ...

ಗಿ: ಕೈಯಾ... ಕೊಟ್ಟೆ.... ಸೇಲ್ಸ್‌ಗರ್ಲ್ ಬಾ ಬಳಿಗೆ.... ಟ್ರಾಫಿಕ್ಕಿನೀ ರಸ್ತೆಯಲಿ ಕೈ ಹಿಡಿದು ನಡೆಸೆನ್ನನು...

ಮಾ: (ಗಿರಾಕಿಯ ತೋರುಬೆರಳಿಗೆ ಇಷ್ಟೇ ಲಿಪ್‌ಸ್ಟಿಕ್ ಹಚ್ಚಿ) ಈಗ ಆ ಬೆರಳನ್ನ ಇನ್ನೊಂದು ಬೆರಳಿಗೆ ತಾಗಿಸಿ ಸಾರ್... (ಗಿರಾಕಿ ತಾಗಿಸಿದ ತಕ್ಷಣ ಅಂಟಿಕೊಂಡುಬಿಡುವುದು. ಏನೇ ಪ್ರಯತ್ನಿಸಿದರೂ ಅಂಟು ಬಿಡಿಸಲಾಗುವುದಿಲ್ಲ) ನೋಡಿದಿರಾ... ಹೇಗಿದೇ ಎಂಎಸ್ ಲಿಪ್‌ಸ್ಟಿಕ್ ಪ್ರಭಾವ.... ಇನ್ನೇನು ಜಗಳ ಶುರು ಆಗತ್ತೆ ಅನ್ನೋವಾಗ ಇದನ್ನ ತುಟಿಗೆ ಹಚ್ಕೊಂಡ್ರೆ ಲಿಪ್ - ತುಟಿ; ಸ್ಟಿಕ್ - ಅಂಟಿಕೊಂಡು; ಎಂಎಸ್ ಸಕ್ಸಸ್...

ಗಿ: ಎಂಎಸ್ ಅಂದ್ರೆ?

ಮುಂದಿನ ಪುಟ ನೋಡಿ ...

ಮಾ: ಮ್ಯಾರೇಜ್ ಸೇವರ್ ಅಂತ ಸಾರ್.... ಮೌನೇನ ಕಲಹಂ ನಾಸ್ತೀ...

ಗಿ: (ತಲೆ ಅಡ್ಡಡ್ಡಲಾಗಿಸುತ್ತ) ನಮ್ಮನೇಲಿ ಇದು ನಡೆಯಲ್ಲ... ನಮ್ಮನೇಲಿ ಮೌನೇನ ಕಲಹಂ ಜಾಸ್ತಿ... ಅಲ್ಲದೆ ನಮ್ಮ ಮನೇಲಿ ನನ್ನದೇ ಕಡೇ ಮಾತು

ಮಾ: (ಅಚ್ಚರಿಯಿಂದ) ವಂಡರ್ಫುಲ್.... ಹೀ ಮ್ಯಾನ್ ಸಾರ್ ನೀವೂ.... ಅಂದಹಾಗೇ ಆ ಕಡೇ ಮಾತು ಏನು ಸಾರ್?

ಗಿ: ಅವಳು ಏನೇ ಹೇಳಿದರೂ ಕಡೇಲಿ ನಾನು ಹೇಳೋದು ಒಂದೇ ಮಾತು - ಎಸ್ ಡಿಯರ್... (ನಿಟ್ಟುಸಿರು ಬಿಟ್ಟು) ಮೊದಲು ಈ ಬೆರಳು ಬಿಡಿಸಿ. ಆಮೇಲೆ ಬೇರೆ ಪ್ರಾಡಕ್ಟ್ ತೋರಿಸಿ.

ಮಾ: ಶೂರ್ ಸರ್ (ಚಿಕ್ಕ ಬಾಟಲಿನಿಂದ ದ್ರವವೊಂದನ್ನು ತೆರೆದು ಬೆರಳಿನ ಅಂಟಿದ ಭಾಗಕ್ಕೆ ಸುರಿಯುವಳು)

ಗಿ: ಅಯ್ಯೋ.... ಉರೀ... ಏನ್ರೀ ಅದೂ...? ಹೋಯ್ತು ಬೆರಳೂ... ಇದನ್ನ ಅಂಟಿದ ತುಟಿಗೆ ಹಚ್ಚೋದ್ರ ಬದಲು ಪರ್ಮನೆಂಟಾಗಿ ತುಟಿ ಅಂಟಿಸಿಕೊಂಡಿರೋದೇ ವಾಸಿ...

ಮಾ: ಎಕ್ಸಾಕ್ಟ್ಲಿ ಸಾರ್... ಯೂ ಆರ್ ಸೋ ಅಂಡರ್‌ಸ್ಟ್ಯಾಂಡಿಂಗ್...

ಗಿ: (ತಬ್ಬಿಬ್ಬಾಗಿ) ಅಂದರೆ... ಅದನ್ನ ಅಂಟಿಸಿಕೊಂಡರೆ ತುಟಿ ಬಿಚ್ಚಕ್ಕೇ ಆಗಲ್ವಾ?

ಮಾ: ಆಗತ್ತೆ. ಹೊಸದಾದ ಚಿನ್ನದ ಐಟಂ ಮೇಲಿನಿಂದ ಸುರಿದ ನೀರು ಬಿದ್ದ ತಕ್ಷಣ ಅದು ಬಿಟ್ಕೊಳತ್ತೆ...

ಗಿ: ಅಂದ್ರೇ.... ತುಟಿ ಬಿಡಿಸ್ಕೋಬೇಕಾದ್ರೆ ಹೆಂಡತಿಗೆ ಹೊಸ ಚಿನ್ನ ಖರೀದಿಸ್ಬೇಕೂನ್ನಿ.....

ಮಾ: (ನಲಿಯುತ್ತಾ) ಎಷ್ಟು ಚೆನ್ನಾಗಿ ಅರ್ಥ ಮಾಡ್ಕೋತೀರಿ ಸಾರ್... ನಿಮ್ಮಂತಹ ಹಸ್ಬೆಂಡ್ ಸಿಗಕ್ಕೆ ಪುಣ್ಯ ಮಾಡಿರ್ಬೇಕು...

ಗಿ: (ಸ್ವಗತ) ಇಂತಹವಳನ್ನ ಪಡೆಯೋ ಯೋಗ ನನಗಿಲ್ವೇ... (ಪ್ರಕಾಶ) ಬಿಡಿ ಆ ಮಾತು. ಬೇರೆ ಪ್ರಾಡಕ್ಟ್ ತೋರಿಸಿ.

ಮಾ: (ಕರ್ಚೀಫಿನ ಒಂದು ಬಂಡಲ್ ಹೊರತೆಗೆಯುತ್ತಾ) ಇದು ಮೈಕೆಲೆಂಜಲು ಬ್ರ್ಯಾಂಡ್ ನ್ಯಾಪ್‌ಕಿನ್ಸ್ ಸಾರ್... ಲೇಟೆಸ್ಟ್ ಟ್ರೆಂಡ್ ಇದು...

ಗಿ: ಫೇಮಸ್ ಪೇಂಟರ್ ಮೈಕೆಲ್ ಏಂಜೆಲೋ ಬ್ರ್ಯಾಂಡಾ?

ಮಾ: (ನಗುತ್ತಾ) ಮೈಕೆಲ್ ಏಂಜೆಲೋ ಅಲ್ಲ ಸಾರ್... ಮನೆಯಲ್ಲಿ ಗಂಡಸೇ ಕೆಲಸ ಮಾಡುವಾಗ, ಅವನೇ ಪಾತ್ರೆ ತೊಳೆಯುವಾಗ, ಮೈಕೆಯೆಲ್ಲ ಮುಸುರೆ, ಎಂಜಲು ಆಗಿರತ್ತಲ್ಲ, ಅದನ್ನ ಒರೆಸ್ಕೊಳಕ್ಕೆ ಸಾರ್.... ಮೈಕೈಯೆಲ್ಲೆಂಜಲು ನ್ಯಾಪ್‌ಕಿನ್ಸ್ ಸಾರ್... ಇಟಾಲಿಯನ್ ಮೋಸ್ಟ್ ಫೇಮಸ್ ಫೆಷ್‌ಗಳೆಲ್ಲ ಇದನ್ನೇ ಬಳಸೋದು...

ಗಿ: ಊಹೂಂ. ನಮ್ಮಲ್ಲಿ ಅದಕ್ಕೆ ಬೇಕಾದಷ್ಟು ಹಳೆ ಹರಕಲು ಬಟ್ಟೆಗಳಿವೆ. ನೆಕ್ಸ್ಟ್ ಪ್ರಾಡಕ್ಟ್ ಪ್ಲೀಸ್...

ಮಾ: ನಿಮ್ಮ ಏರಿಯಾದಲ್ಲಿ ಸೊಳ್ಳೆಗಳು ಇವೆಯಾ ಸಾರ್?

ಗಿ: ಇದೆ.

ಮಾ: ತೊಗೊಳಿ ಸಾರ್... ಸೊಳ್ಳೆಗಳನ್ನು ಇಲ್ಲವಾಗಿಸುತ್ತಾ ಶ್ರೀಮಂತರಾಗಲು ಇದಿಗೋ ಬಂದಿದೆ ಮಸ್ಕಿಟೇಷಿಯಾ..

ಗಿ: ಮಸ್ಕಿಟೇಷಿಯಾ? ಏನ್ರೀ ಹಾಗಂದ್ರೆ? ಇದರಿಂದ ಶ್ರೀಮಂತರಾಗೋದು ಹೇಗೆ?

ಮಾ: ಸೊಳ್ಳೆಗಳು ಜ್ಞಾನ ತಪ್ಪಿ ಬೀಳಕ್ಕೆ ಬಳಸೋ ಅನಸ್ತೇಷಿಯಾ ಸಾರ್ ಇದು...

ಗಿ: ಆಹಾ! ಮಸ್ಕಿಟೋದ ಅನಸ್ತೇಷಿಯಾಗೆ ಮಸ್ಕಿಟೇಷಿಯಾ ಅಂತಾನಾ? ಚೆನ್ನಾಗಿದೆ. ಮುಂದೆ?

ಮಾ: ಇರಿ. ಇಲ್ಲೇ ಇಂಸ್ಟ್ರಕ್ಷನ್ಸ್ ಇದೆ. ಹೊಸಾ ಪ್ರಾಡಕ್ಟ್ ಇದು (ಹಾಳೆಯೊಂದನ್ನು ತೆಗೆದು ಓದುತ್ತಾಳೆ) ಮೊದಲು ಸೊಳ್ಳೆಗಳಿಗೆ ತಾಕುವಂತೆ ಈ ದ್ರಾವಣವನ್ನು ಸಿಂಪಡಿಸಿ. ಅದು ಜ್ಞಾನ ತಪ್ಪಿ ಉರುಳಿದಾಗ ಅದನ್ನು ದೊಡ್ಡದೊಂದು ಸೊಳ್ಳೆ ಪರದೆಯಲ್ಲಿ ಹಿಡಿಯಿರಿ. ಜ್ಞಾನ ತಪ್ಪಿದ ಸೊಳ್ಳೆಗಳ ತೂಕ ಸುಮಾರು ಒಂದು ಕೆಜಿ ಆದಾಗ ಅದನ್ನ ಚೀನಾಗೆ ಸಪ್ಲೈ ಮಾಡಿ.

ಗಿ: ಯಾಕೆ?

ಮಾ: ಅವರು ಅಲ್ಲಿ ಅದನ್ನ ಹಾಕ್ಕೊಂಡು ಮಸ್ಕಿಟೋ ಸೂಪ್ ಮಾಡ್ತಾರಂತೆ... ಒಳ್ಳೇ ರೇಟ್ ಸಿಗತ್ತೆ...

ಗಿ: ಗುಡ್ ಐಡಿಯ... ಎಲ್ಲಿ... ಚೂರೇ ಚೂರು ಸ್ಪ್ರೇ ಮಾಡಿ.... (ಮಾರ್ಗರೇಟ್ ಸ್ಪ್ರೇ ಮಾಡುವಳು) ಅಯ್ಯಯ್ಯೋ... ಇದೇನ್ರೀ ಇದೂ... ಸತ್ತು ಮೂರು ದಿವಸ ಆಗಿರೋ ನಾಯೀ ಬಾಡೀ ತರಹ ವಾಸನೇ.... ವ್ಯಾಕ್... ಇದಕ್ಕಿಂತ ಸೊಳ್ಳೆ ಕೈಲಿ ಕಚ್ಚಿಸ್ಕೊಳೋದೇ ವಾಸಿ.... (ವಾಸನೆ ಹೋಗಿಸಲು ಕೈ ಅಡ್ಡಡ್ಡಾ ಆಡಿಸುತ್ತಾ, ಕೆಮ್ಮುತ್ತಾ) ನೆಕ್ಸ್ಟ್ ಪ್ರಾಡಕ್ಟ್... ನೆಕ್ಸ್ಟ್ ಪ್ರಾಡಕ್ಟ್...

ಮಾ: ಈ ಟಿಂಬಕ್ಟೂ ಸೆಲ್‌ಫೋನ್ ಸೆಟ್ ತೊಗೊಳಿ ಸಾರ್... ಮಲ್ಟಿ ಪರ್ಪಸ್ ಸೆಟ್ ಇದು...

ಗಿ: ಏನು ಇದರ ಫೀಚರ್ಸು?

ಮಾ: ಇದನ್ನ ಟೆನ್ ಮಿನಿಟ್ಸ್ ಯೂಸ್ ಮಾಡಿದ್ರೆ ಒಂದು, ಫಿಫ್ಟೀನ್ ಮಿನಿಟ್ಸ್ ಯೂಸ್ ಮಾಡಿದ್ರೆ ಒಂದು, ಈತರಹ ಅಡ್ವಾಂಟೇಜಸ್ ಇವೆ ಸಾರ್...

ಗಿ: ಏನವು?

ಮುಂದಿನ ಪುಟ ನೋಡಿ ...

ಮಾ: 10 ನಿಮಿಷ ಬಳಸಿದರೆ ಆಗೋ ಹೀಟಲ್ಲಿ ಬಟ್ಟೆ ಐರನ್ ಮಾಡ್ಕೋಬಹುದು; 15 ನಿಮಿಷ ಯೂಸ್ ಮಾಡಿದ ಹೀಟಲ್ಲಿ ನೀರು ಕಾಯಿಸ್ಬಹುದು; ಅರ್ಧ ಗಂಟೆ ಯೂಸ್ ಮಾಡಿದ ಹೀಟಲ್ಲಿ ಬಾಂಡ್ಲಿ ಇಟ್ಟು, ಎಣ್ಣೆ ಕಾಯಿಸಿ ಬೋಂಡ ಕರೀಬಹುದು...

ಒನ್ ಅವರ್ ಮಾತಾಡಿದರೆ ಚಳಿಗಾಲದಲ್ಲಿ ರೂಮ್ ಹೀಟರ್ರೇ ಬೇಡ... ಮಲ್ಟಿಪರ್ಪಸ್ ಫೋನ್ ಸಾರ್...

ಗಿ: ಪ್ರಯೋಜನ ಇಲ್ಲ.

ಮಾ: ನೀವು ಎಷ್ಟೊಂದು ಮನೆಕೆಲಸ ಮಾಡ್ತೀರಲ್ಲಾ (ಅನುಕಂಪ ತೋರುತ್ತಾ) ಪಾಪ! ನಿಮಗೆ ಮೈಕೈ ನೋವು ಬರಲ್ವಾ ಸಾರ್...?

ಗಿ: (ಅನುಕಂಪಕ್ಕೆ ಕರಗಿ) ಬರ್ದೇ ಇರತ್ತಾ? ಸೊಂಟ ಬಿದ್ಹೋಗತ್ತೆ...

ಮಾ: ಅದಕ್ಕೇ ಈ ಫೋನ್ ತೊಗೊಳಿ ಸಾರ್... ವೈಬ್ರೇಷನ್ ಮೋಡಲ್ಲಿ ಹಾಕಿದರೆ ಸೂಪರ್ ಮಸಾಜ್ ಆಗತ್ತೆ ಸಾರ್...

ಗಿ: ಬಿದ್ರೆ ಏನು ಆಗಲ್ವಾ?

ಮಾ: ಏನೇನೂ ಆಗಲ್ಲ ಸಾರ್. ಮೊನ್ನೆ ಗುಜರಾತ್ ಎಲೆಕ್ಷನ್ ಟೈಮಲ್ಲಿ ಎಲ್ಲ ಮಿನಿಸ್ಟರ್ಗಳಿಗೂ ಜಗಳ ಆಡಕ್ಕೇಂತ ಇದನ್ನೇ ಕೊಟ್ಟಿದ್ವೀ. ಎಮ್ಮೆಚರ್ಮದ ಮಂತ್ರಿಗಳಿಗೆ ಸಹ ಏಟಾಯ್ತೇ ವಿನಹ ಇದಕ್ಕೆ ಏನೇನೂ ಆಗ್ಲಿಲ್ಲ. ಟೆನ್ ಫೀಟಿಂದ ಎತ್ತಾಕಿದ್ರೂ ಏನೂ ಆಗಲ್ಲ. ಜಸ್ಟ್ ಟೆನ್ ಥೌಸೆಂಡ್ ಸಾರ್....

ಗಿ: ಟೆನ್ ಥೌಸೆಂಡ್? ನನ್ನ ಹೆಂಡತಿಗೆ ಗೊತ್ತಾದರೆ "ನಿಮ್ಮ ಬೆನ್ನು ಬೀಳ... ಆ ದುಡ್ಡಲ್ಲಿ ತ್ರೀ ಗ್ರಾಮ್ಸ್ ಗೋಲ್ಡ್ ಬರತ್ತೆ..." ಅಂತ ಬೈತಾಳೆ. ಬೇಡ...

ಮಾ: ಹೆಂಡತೀಗೆ ಹೆದರ್ತೀರಾ ಸಾರ್? ಹಿಹಿಹಿ...

ಗಿ: ಅದೂ... ಅದೂ.... ಹೆದರಿಕೆ ಅಂತ ಅಲ್ಲಾ.... ರೆಸ್ಪೆಕ್ಟ್..... ಮರ್ಯಾದೆ.... ವುಮೆನ್ ಆರ್ ಈಕ್ವಲ್ ಟು ಮೆನ್.... ಅನ್ನೋ ಭಯ.... ಐ ಮೀನ್... ಮರ್ಯಾದೆ....

ಮಾ: ಅರ್ಥವಾಯ್ತು ಬಿಡಿ... (ಚೇಲದಿಂದ ಮತ್ತೊಂದು ಐಟಂ ತೆಗೆಯುತ್ತಾ) ಇದು ನೋಡಿ... ಲೇಟೆಸ್ಟ್ ಇನ್ ದ ಮಾರ್ಕೆಟ್... ಸ್ಪೆಷಲ್ ವೆರೈಟಿ ಗಾಗಲ್ಸ್

ಗಿ: ಏನು ಇದರ ಸ್ಪೆಷಾಲಿಟಿ?

ಮಾ: ಈ ಕಡೆಯಿಂದ ನೋಡಿದರೆ ನೀವು ಕುರುಡರ ತರಹ ಕಾಣ್ತೀರ; ಆಕಡೆಯಿಂದ ನಿಮಗೆ ಎಲ್ಲಾ ಕಾಣ್ತಿರತ್ತೆ. ಲೇಡೀಸ್ ಹಾಸ್ಟೆಲ್ ಮುಂದೆ ನಿಂತು ಲೈನ್ ಹೊಡೆದು "ಸಿಂಪಥಿ ಫ್ಯಾಕ್ಟರ್" ಮೇಲೆ ಹುಡುಗೀರ್ನ ಬೀಳಿಸ್ಕೊಳೋಕ್ಕೆ ಮಾಡ್ರನ್ ಬಾಯ್ಸ್ ಬಳಸೋ ಗಾಗಲ್ಸ್ ಇದು.

ಗಿ: (ಬಾಯಿ ತೆಗೆದು ತೋರಿಸುತ್ತಾ) ಬಲಗಡೆಯ ಮೇಲಿನ ಸಾಲಿನ ಎರಡನೇ ದವಡೆ ಹಲ್ಲು ಉದುರಿದೆ, ಕಾಣತ್ತಾ?

ಮಾ: ಹುಂ. ಕಾಣಿಸ್ತಿದೆ.

ಗಿ: ಇದೇ ತರಹದ ಗಾಗಲ್ಸು... ಇದೇ ಐಡಿಯ... ಆ ಹಾಸ್ಟೆಲ್‌ನ ಹುಡುಗಿ ಕರಾಟೆ ಎಕ್ಸ್‌ಪರ್ಟ್; ಬ್ಲ್ಯಾಕ್‌ಬೆಲ್ಟ್... ಎರಡು ವರ್ಷ ಹಿಂದೆ ನಡೆದದ್ದು.... ಮೂರು ಮೂಳೆ, ಎರಡು ಹಲ್ಲು ಢಮಾರ್... ನೆಕ್ಸ್ಟ್ ಐಟಂ ಪ್ಲೀಸ್...

ಮಾ: ಇನ್ನೊಂದೇ ಐಟಂ ಸಾರ್... ನೀವು ನಿಮ್ಮ ಹೆಂಡತಿ ಜೊತೆ ಮಾರ್ಕೆಟ್‌ಗೆ ಹಬ್ಬಗಳ ದಿನ ಹೋಗ್ತೀರಾ?

ಗಿ: ಹೂಂ

ಮಾ: ಹಾಗಾದರೆ ಇದೋ ಶ್ರೀಲಿಂಕನ್ ಲಿಂಕಿಂಗ್ ರಿಂಗ್ಸ್....

ಗಿ: ಏನ್ರೀ ಅದು? ಅತ್ಲಾಗೆ ಶ್ರೀಲಂಕದ್ದೂ ಅಲ್ಲ, ಇತ್ಲಾಗೆ ಅಬ್ರಹಾಂ ಲಿಂಕನ್‌ದೂ ಅಲ್ಲ. ಏನದು ಶ್ರೀಲಿಂಕನ್ ಅಂದರೆ?

ಮಾ: ಶ್ರೀಮತಿಯ ಕೈ ಜೊತೆಗೆ ಶ್ರೀ ಯ ಕೈ ಲಿಂಕ್ ಮಾಡುವ ಈ ರಿಂಗೇ ಶ್ರೀಲಿಂಕನ್ ಲಿಂಕಿಂಗ್ ರಿಂಗ್... ಕ್ರೌಡ್ ಜಾಸ್ತಿ ಇರೋವಾಗ, ನೆಟ್‌ವರ್ಕ್ ನೆಟ್ಟಿ ಇಲ್ದೇಯಿರೋವಾಗ ಗಂಡ ತನ್ನ ಅಭ್ಯಾಸಬಲದಂತೆ ಹೆಂಡತಿಯಿಂದ ತಪ್ಪಿಸಿಕೊಂಡು ಹೋಗದೇ ಇರಲೀಂತ ಇಬ್ಬರಿಗೂ ಲಿಂಕ್ ಮಾಡೋ ರಿಂಗ್ ಇದು.

ಗಿ: ಇಂಟರೆಸ್ಟಿಂಗ್... ಹೇಗೆ ಹಾಕ್ಕೊಳೋದು?

ಮಾ: (ತನ್ನ ಕೈಗೊಂದು ರಿಂಗ್ ಧರಿಸಿ, ಕೋಳದಂತೆ ಸೇರಿಕೊಂಡಿರುವ ಇನ್ನೊಂದನ್ನು ರಿಂಗನ್ನು ಗಿರಾಕಿಯ ಕೈಗೆ ಸಿಕ್ಕಿಸಿ ಕೀ ತಿರುಗಿಸಿ ಭದ್ರ ಪಡಿಸುತ್ತಾ) ಹೀಗೆ... ಹೀಗೆ ಕೈಕೈ ಮಿಲಾಯಿಸಿಕೊಂಡು ನಾನು ನೀನು ಜೋಡಿ ಜೀವನ ಎತ್ತಿನಗಾಡೀ ಅಂತ ಹೋಗ್ತಾಯಿದ್ರೇ....

(ಅಷ್ಟರಲ್ಲಿ ಗಿರಿಯಪ್ಪನ ಜಾತಕದಲ್ಲಿದ್ದ ಶನಿ ಎಂಟನೆಯ ಮನೆಗೆ ಬಂದ. ಅದರ ದ್ಯೋತಕವಾಗಿ ಗಿರಿಯಪ್ಪನ ಸತಿ ಗಿರಿಜಕ್ಕ ಕೆಂಗಣ್ಣಿನ ಇನ್‌ಬ್ಯುಲ್ಟ್ ಮೇಕಪ್ ಸಹಿತ ಹಾಜರ್!)

ಗಿರಿಜಕ್ಕ: ಅಯ್ಯೋ ಅಯ್ಯೋ ಅಯ್ಯೋ... ಮನೇಲಿ ರಾಮಣ್ಣ ಬೀದೀಲಿ ಶಾಮಣ್ಣ ಅಂತ ಏನ್ರೀ ಇದು ನಿಮ್ಮ ಆಟ... ರೆಡ್ ಹ್ಯಾಂಡೆಡ್ ಆಗಿ ಸಿಕ್ಹಾಕ್ಕೊಂಡಿದೀರಾ..... ಬಿಡಿಸ್ತೀನಿ ಇಬ್ಬರಿಗೂ ಗ್ರಹಚಾರ.... ಏನೇ.... ನನ್ನ ಗಂಡನ ಮೇಲೇ ಕಣ್ಹಾಕ್ತೀಯಾ...

(ಇಬ್ಬರೂ ತಪ್ಪಿಸಿಕೊಳ್ಳಲು ವಿರುದ್ಧ ದಿಕ್ಕಿನಲ್ಲಿ ಓಡುವರು. ಕೋಳ ತೆರೆದುಕೊಳ್ಳುವುದು. ಗಂಡನನ್ನು ಬೆನ್ನು ಹತ್ತಿ ಹೆಂಡತಿ ಓಡುತ್ತಾ ಸಾಗುವಳು. ತೆರೆ.) ▪

ಮರಣ ದಂಡನೆ

ಕನಕಾಪುರ ನಾರಾಯಣ

ಸಂಗಮಪುರ ಎಂಬ ಊರಿಗೆ ಭಾರೀ ಕಳ್ಳನೊಬ್ಬ ನುಸುಳಿ ಪ್ರತಿ ರಾತ್ರಿ ಒಂದೊಂದು ಮನೆಗೆ ಲಗ್ಗೆ ಇಡುತ್ತಿದ್ದ. ಹಣ, ಒಡವೆ, ಆಸ್ತಿಗಳನ್ನು ಕಳೆದುಕೊಂಡು ಆತನನ್ನು ಹಿಡಿಯಲೂ ಆಗದೆ ಅಲ್ಲಿನ ಜನಸಂಕಟ ತಾಳಲಾರದೆ ಊರಿನ ರಾಜನ ಬಳಿ ತಮ್ಮ ಕಷ್ಟ ತೋಡಿಕೊಂಡರು. ಈತ ಭಾರಿ ಕಳ್ಳನೇ ಇರಬೇಕು ಎಂದು ಆಲೋಚಿಸಿ ಸ್ವತಃ ರಾಜ ತಾನೇ ಮಾರುವೇಷದಲ್ಲಿ ರಾತ್ರಿ ಊರೆಲ್ಲಾ ಓಡಾಡುತ್ತಾಬಂದು ಮನೆಯ ಮೇಲೆ ಕಳ್ಳನಂತೆ ಏಣಿ ಏರುತ್ತಿದ್ದ ರಾಜ, ಅವನನ್ನು ಹಿಂಬಾಲಿಸಿ ಬರುತ್ತಿದ್ದ ಕಳ್ಳನು ರಾಜನನ್ನು ತಡೆದ, ರಾಜನು `ತಾನೊಬ್ಬ ಚಿಕ್ಕ ಕಳ್ಳ ನನ್ನನ್ನು ಬಿಟ್ಟುಬಿಡು' ಎಂದು ಯಾಚಿಸಿದ, ಕಳ್ಳನುಹಾಗೆ ಮಾಡದೆ ತಾನು ಮಾಡುವ ಕಳ್ಳತನಕ್ಕೆ ಜೊತೆಯಾಗಿ ಕೆಲಸ ಮಾಡಲು ಕೇಳಿದ.

ರಾಜನಿಗೂ ಅದೇ ಬೇಕಿತ್ತು. ಅಂದು ರಾತ್ರಿಯೇ ಹಲವಾರು ಮನೆಗೆ ನುಗ್ಗಿ ನಾಗ-ನಾಣ್ಯ ದೋಚಿದರು. ಕಳ್ಳನುಒಂದು ಮನೆಯ ಹೆಂಚಿನ ಮೇಲಿಂದ ಜಾರಿ ಬಿದ್ದು ಪ್ರಾಣ ಕಳೆದುಕೊಳ್ಳುವ ಸಂದರ್ಭದಲ್ಲಿ ರಾಜ ಅವನ ಪ್ರಾಣ ಉಳಿಸಿದ. ಆಗ ಕಳ್ಳ ರಾಜನಿಗೆ ಇನ್ನೂ ಆಪ್ತನಾದ. ಪರಸ್ಪರ ಮಾತು ಬೆಳೆದು ತನಗೆ ಈಕಳ್ಳತನ ಮಾಡುವ ಕೆಲಸ ಇಷ್ಟವಿಲ್ಲ, ಆದರೆ ನಾನು ಒಬ್ಬ ಮಹಾ ಪೈಲ್ವಾನನೂ ಆಗಿದ್ದೆ , ಈ ರಾಜ್ಯದಲ್ಲಿ ಕೆಲಸ ಅರಸಿ ಬಂದೆ, ಆದರೆ ಕಳ್ಳ ರಾಜಭಟರು ನನ್ನನ್ನು ರಾಜನ ಬಳಿ ಬಿಡಲೇ ಇಲ್ಲ, ಎಂದೆಲ್ಲಾತನ್ನ ನೋವನ್ನು ತೋಡಿಕೊಂಡ ಆ ಕಳ್ಳ. ಸೂರ್ಯ ಮೂಡುವ ವೇಳೆಗೆ ತನ್ನ ಮನೆಗೆ ರಾಜನನ್ನು ಕರೆದೊಯ್ದ. ಅಲ್ಲಿ ರಾಜನು ಪ್ರತ್ಯಕ್ಷವಾಗಿ ಆ ಕಳ್ಳನು ಎಲ್ಲಾಕಡೆ ಅಪಹರಿಸಿದ್ದ ಆಸ್ತಿಯನ್ನು ಕಂಡ, ನಂತರ ಆತನಿಗೆ ತಾನು ಕಳ್ಳನಲ್ಲ ಈ ಊರಿನ ರಾಜ ಎಂದು ತಿಳಿಸಿ ಅವನೊಡನೆ ಕುಸ್ತಿ ಮಾಡಿ ಕಳ್ಳನನ್ನು ಬಂಧಿಸಿದ.

ಇದಕ್ಕೂ ಮೊದಲು ಆ ಊರಿಗೆ ಬಂದಾಗಿನಿಂದ ಆ ಕಳ್ಳನಿಗೆ ಒಬ್ಬ ವ್ಯಾಪಾರಿಯ ಮಗಳ ಮೇಲೆ ಪ್ರೇಮವಾಗಿತ್ತು. ಆತನ ಹುದ್ದೆಯ ಬಗ್ಗೆ ಅರಿತಿದ್ದರೂ ಆಕೆಯೂ ಕಳ್ಳನನ್ನು ಬಹಳ ಪ್ರೀತಿಸುತ್ತಿದ್ದಳು.ಈಗಬಂಧಿತನಾದ ಕಳ್ಳನಿಗೆ ಮರಣ ದಂಡನೆಯಾಯಿತು. ಅಲ್ಲಿಗೆ ಧಾವಿಸಿ ಬಂದ ವ್ಯಾಪಾರಿ ಆತನನ್ನು ಬಿಡುಗಡೆ ಮಾಡಿ ಎಂದು ಕೇಳಿಕೊಂಡ, ಆತನ ಮಗಳೂ ರಾಜನಿಗೆ ತಾನೂ ಕಳ್ಳನ ಜೊತೆ ಸಹಗಮನಮಾಡುವೆ ಎಂದಳು ಪ್ರತಿಜ್ಞೆ ಮಾಡಿದಳು. ಆಗ ಕಳ್ಳ ಒಮ್ಮೆ ಅತ್ತು, ಕೂಡಲೇ ಜೋರಾಗಿ ನಕ್ಕ. ನಂತರ ರಾಜ ಆಲೋಚಿಸಿ ಕಳ್ಳನನ್ನು ಬಿಡುಗಡೆ ಮಾಡಿ ತನ್ನ ಆಸ್ಥಾನದಲ್ಲೇ ಕಾವಲು ಕೆಲಸ ಕೊಟ್ಟ, ವ್ಯಾಪಾರಿಯ ಮಗಳ ಜೊತೆಗೆ ಅವನ ವಿವಾಹವೂ ಆಯಿತು. ಮುಂದೆ ಕಳ್ಳತನ ಬಿಟ್ಟು ಸುಖವಾಗಿ ಬಾಳಿದ.... ಎಂದು ಹೇಳಿ ಕಥೆ ನಿಲ್ಲಿಸಿತು ಬೇತಾಳ.

ಬೇತಾಳದ ಪ್ರಶ್ನೆ ಹೀಗಿತ್ತು: "ಕಳ್ಳ ಏತಕ್ಕಾಗಿ ಅತ್ತ ? ಮತ್ತೆ ಏತಕ್ಕಾಗಿ ನಕ್ಕ ?"

ಅದಕ್ಕೆ ವಿಕ್ರಮನ ಉತ್ತರ: " ಕಳ್ಳನು ತನ್ನ ಸ್ನೇಹಿತನಿಂದಲೇ ನನಗೆ ಬಂಧನ ವಂಚನೆ ಆಯಿತಲ್ಲಾ ಎಂದು ಅತ್ತ , ಆದರೆ ಅದೇ ಸ್ನೇಹಿತ ಮನ್ನಿಸಿ ತನ್ನ ಮನೆಯಲ್ಲೇ ಕೆಲಸ ಕೊಟ್ಟನಲ್ಲಾ ಎಂದು ನಕ್ಕ " ಎಂದು ಹೇಳಿದ.

ಉತ್ತರ ಹೆಚ್ಚಿದ ಬೇತಾಳ ವಿಕ್ರಮನ ಬೆನ್ನು ಬಿಟ್ಟು ಹಾರಿ ಹೋಯಿತು.▪

ಚಿಲುಮೆಯ ಎಲ್ಲಾ ಸಂಚಿಕೆಗಳೂ ಸೇರಿದಂತೆ ಕಥೆ, ಕವನ, ಹಾಸ್ಯ, ಆರೋಗ್ಯ ... ಇನ್ನಿತರ ಸಾಹಿತ್ಯಕ್ಕೆ ಭೇಟಿಕೊಡಿ
HTTP://WWW.SUGAMAKANNADA.COM/

ಖರ್ಜೂರದ ರಾಯತ



ಬೇಕಾಗುವ ಸಾಮಗ್ರಿಗಳು

- ಒಂದು ಲೋಟ ಮೊಸರು
- ನೂರು ಗ್ರಾಂ ಖರ್ಜೂರ
- ಒಂದು ಹೋಳು ತೆಂಗಿನತುರಿ
- ಕರಿಮೆಣಸು ನಾಲ್ಕು
- ಉಪ್ಪು ರುಚಿಗೆ

ಮಾಡುವ ವಿಧಾನ

- ಖರ್ಜೂರವನ್ನು ಬೀಜ ತೆಗೆದು, ಮೆಣಸು ಮತ್ತು ತೆಂಗಿನ ಕಾಯಿ ತುರಿಯೊಂದಿಗೆ ಸೇರಿಸಿ ರುಬ್ಬಿಕೊಳ್ಳಿ
- ಅದಕ್ಕೆ ಉಪ್ಪು ಸೇರಿಸಿ ಮೊಸರಿಗೆ ಬೆರೆಸಿ
- ಪುಟ್ಟ ಬಾಣಲೆಯಲ್ಲಿ ತುಪ್ಪದ ಒಗ್ಗರಣೆ ಮಾಡಿ ಮಿಶ್ರಣಕ್ಕೆ ಬೆರೆಸಿ, ಉಣಬಡಿಸಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆ ಸಿ ಪಿ ಕೊ ಡ್ತೀ ರಾ!

ಒಗಟು

೧. ಕೆಂಪು ಹೆಣ್ಣಿನ ತುಟಿ ಕರೀಗಿದೆ

೨. ಅಕ್ಕನ ಕೈಗೆ ಇಕ್ಕೊರುಂಟು , ಅಳಿಸೋರಿಲ್ಲ

ಉತ್ತರಕ್ಕೆ ಪುಟ ೧೩ ನೋಡಿ

ಗೆ ...

ಬಾ ಇಲ್ಲಿ ಮಮ ಬಂಧು
ಬಾ ಅಮೃತದ ಬಿಂದು
ಬಾಳ್ ತೆರೆದಿದೆ

ಇರುಳು ಮುಸುಕಿದ ಮನಕೆ
ನಿನ್ನೊಳೊಂದಿದೆ ಅರಿಕೆ
ಬಾ ಬೆಳಗುತಾ

ಬರಡಾದ ಎದೆಯಲ್ಲಿ
ಹನಿಯೆರಡನುಣಿಸು
ಬಾಯ್ ತೆರೆದಿದೆ

ವ್ಯಸನವಾಗಲಿ ದೂರ
ಹಸನು ಆಗಲಿ ಚಿತ್ತ
ಬಾ ಹತ್ತಿರ

ಮಧುರ ಕವಿತೆಯ ಸಾಲೆ
ಅಧರ ಬಯಸುವ ಹಾಲೆ
ಬಾ ಬಳಕುತಾ

ಬಾ ನನ್ನ ಬದುಕುಳಿಸು
ನನ್ನ ಕಾವ್ಯವ ಬೆಳೆಸು
ಬಾನೆತ್ತರ

-ಮಾಲು, ಅಡಿಲೈಡ್

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಕಾಡಿನಲ್ಲಿ ಹಲಸು, ಜೇನಿನ ರಸಾಯನ ಮಾಡುವ ಪ್ರವೀಣ ಪ್ರಾಣಿ.

೨. ನಾಯಕನ ಆಯ್ಕೆಗೆ ಎಲ್ಲರಿಂದಲೂ ಬೇಕಾದ ಒಪ್ಪಿಗೆ.

೩. ಉಟ ಬಡಿಸಲು ಶ್ರೇಷ್ಠವಾದ ಬಾಳೆಲೆಯ ಮುಂಭಾಗ.

೪. ಹುಣ್ಣಿಮೆಯ ದಿನ ಹುಟ್ಟಿದ್ದಕ್ಕೆ ಆ ಹುಡುಗಿಗೆ ಇಟ್ಟ ಹೆಸರು.

೫. ಅಂಬರದಿಂದ ತಂದುದೇನು, ನಾರಾಯಣನು ಧರಿಸಿದ ನಾಜೂಕಿನ ವಸ್ತ್ರ.

೬. ಕಾಡಿನಿಂದ ಆರಿಸಿ ತಂದ ಸಮಿತ್ತುಗಳಿಂದ ನಡೆಸಿದ ಅಗ್ನಿಕಾರ್ಯ.

ಉತ್ತರ: ಮೂಡಣ ದಿಕ್ಕಿಗಿರುವ ಆಕಾಶಕಾಯದಿಂದ

ಭಾದಿತನಾದವನು ಎಂದೇನಲ್ಲ, ಈ ಪದಪುಂಜದ ಅರ್ಥ.

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಜೂನ್ ೧೫ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಮಾರ್ಚ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಸುಮ ಅಶೋಕ್, ಸಿದ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ವತ್ಸಲಾ ದ್ವಾರಕಾನಾಥ್, ಬೆಂಗಳೂರು
- ಹರಿಣಿ ರಾವ್, ನವದೆಹಲಿ

೧. ಬೆಳಕಿಗಿಂತ ವೇಗವಾಗಿ ಪ್ರಯಾಣಿಸಬಲ್ಲದ್ದು.

ಮ	ನ	ಸ್ಸು

೨. ಮುನಿದಾಗ ಮಾರಿಯಾದವಳು, ನಾರಿಯಾಗುವುದು ಯಾವಾಗ?

ಒ	ಲಿ	ದಾ	ಗ

೩. ತೆಂಗಿನ ನಾರನ್ನು ಆಂಗ್ಲ ಭಾಷೆಯಲ್ಲಿ ಹೀಗನ್ನಿ

ಕಾ	ಯ	ರ್

೪. ನಾರಾಯಣನಿಂದ ಮೋಕ್ಷ ಪಡೆದ ವನ್ಯಜೀವಿ.

ಗ	ಜೇಂ	ದ್ರ

೫. ಸೋತಿಲ್ಲ ಆದರೂ ಗೆಲುವು ಪರರದ್ದು.

ಪ	ರಾ	ಜ	ಯ

೬. ಚಳಿಗಾಲಕ್ಕೆ ಸೊಗಸು ಕಡಲೇಬೇಳೆಯ ಗರಿಗರಿಯಾದ ಈ ಸ್ವಾದಿಷ್ಟ ತಿನಿಸು.

ಆಂ	ಬೊ	ಡೆ

೭. ಮಡದಿಯನ್ನು ಗೌರವದಿಂದ ಹೀಗೆ ಸಂಭೋದಿಸಬಹುದೇ?

ಶ್ರೀ	ಮ	ತಿ

೮. ಕನ್ನಡದ ಚಿಕ್ಕಪ್ಪ ಹಿಂದಿಯಲ್ಲಿ?

ಚಾ	ಚಾ

ರಾಜರಾಗಿದ್ದೇ ರಾಜಕೀಯ ಹುದ್ದೆಯನ್ನು ಅಲಂಕರಿಸಿದ್ದವರು

ಶ್ರೀ	ಜ	ಯ	ಚಾ	ಮ	ರಾ	ಜೇಂ	ದ್ರ		
ಒ	ಡೆ	ಯ	ರ್						

ಜಾಣ ಕರ್ನಾಟಕ

೧. ಇತ್ತೀಚೆಗೆ 'ಶಕ್ತಿಸ್ಥಳ'ವೆಂಬ ವಿದ್ಯುತ್ ಉತ್ಪಾದನಾ ಕೇಂದ್ರ ನಮ್ಮ ರಾಜ್ಯದಲ್ಲಿ ಆರಂಭವಾಯಿತು. ಇದು ಯಾವ ಮೂಲದ ವಿದ್ಯುತ್ತು? ಇದು ಯಾವ ಊರಿನಲ್ಲಿ? ಮತ್ತು ಇದರ ಹೆಗ್ಗಳಿಕೆ ಏನು?

೨. ಚಿತ್ರದುರ್ಗ, ದಾವಣಗೆರೆ, ರಾಯಚೂರು ಮುಂತಾದ ಬಯಲುಸೀಮೆಯ ಜಿಲ್ಲೆಗಳಲ್ಲಿ ಕಂಡು ಬರುವ ವಿದ್ಯುತ್ ಉತ್ಪಾದನಾ ಸ್ಥಾವರಗಳು ಯಾವ ಮೂಲದವು?

ಸರಿ ಉತ್ತರಕ್ಕೆ ಪುಟ ೨೨ ನೋಡಿ

ಒಗಟು - ಉತ್ತರ

೧.ಗುಲಗಂಜಿ ೨. ಹಚ್ಚೆ

ಹಾಸ್ಯ ಚಿಲುಮೆ

ಟೀಚರ್: ಗುಂಡಾ ನೀರು ಮತ್ತು ನೆಲದಮೇಲೆ ಎರಡೂ ಕಡೆ ಬದುಕಬಲ್ಲ ಪ್ರಾಣಿ ಯಾವುದು?

ಗುಂಡ: ಕಪ್ಪೆ ಸಾರ್

ಟೀಚರ್: ಗುಡ್ ಇನ್ನೂ ಎರಡು ಉದಾಹರಣೆ ಕೊಡು

ಗುಂಡ: ಕಪ್ಪೆಯ ಆಪ್ಪ ಮತ್ತು ಅದರ ಅಮ್ಮ ಸಾರ್

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ರಚನೆ: ಲತಾ ಹೇಮಂತ್

ಹೊಣೆಗಾರ... ನೀನಲ್ಲ, ನಾನಲ್ಲ,... ಆ ಜವರಾಯ.

ರಚನೆ:
ನಾಗಶೈಲ ಕುಮಾರ್

"ಮನೂ....ಮನೂ....."

ಶಕ್ತಿ ಮೀರಿ ಕೂಗಿದೆ,

ಉತ್ತರವೇನಾದರೂ ಬರುತ್ತದೇನೋ ಎಂದು ಕಿವಿಗೊಟ್ಟು ಆಲಿಸಿದೆ.

ಗುಂಡಿಯ ಬಂಡೆ ಬಂಡೆಗಳಿಂದ

"ಮನೂ....ಮನೂ....."

"ಮನೂ....ಮನೂ....."

ಎಂಬ ಕೂಗು ಮತ್ತೆ ಮತ್ತೆ ಕೇಳಿಸಿತು,

ಆದರೆ ಅದು ನನ್ನದೇ ಪ್ರತಿಧ್ವನಿ.

"ಚಂದೂ... ಚಂದೂ...." ಎಂದು, ಮನು ಹಿಂದಿರುಗಿ ಕೂಗುತ್ತಾನೇನೋ ಎಂದು ಕಾತರಿಸಿದ್ದೆ.

ನೂರಾರು ಅಡಿಗಳ ಕೆಳಗೆ, ಹಳ್ಳದಲ್ಲಿ ಬೀಳುತ್ತಿದ್ದ ಜಲಪಾತದ ನೀರಿನ ಅಸ್ಪಷ್ಟ ಸದ್ದು ಬಿಟ್ಟರೆ, ಬೇರಾವುದೇ ಸದ್ದಿಲ್ಲ.

ಗಾಬರಿಯಿಂದ ಮತ್ತೊಮ್ಮೆ ಕೂಗಿದೆ,

"ಮನೂ.....ಮನೂ....."

ಮತ್ತದೇ ಪ್ರತಿಧ್ವನಿಯ ಪುನರಾವರ್ತನೆ.

ಉಳಿದಂತೆ ಭೀಕರ ಮೌನ.

ಟಿಸಿಲು ಟಿಸಿಲಾಗಿ, ತೆಳ್ಳಗೆ ಹರಿದು ಬರುತ್ತಿದ್ದ ನೀರಿನ ನಡುವೆ, ಪಾಚಿಯಿರದೆ, ಒಣಗಿದ್ದ ಬಂಡೆಗಳ ಮೇಲೆ ಜೋಪಾನವಾಗಿ ಹೆಜ್ಜೆ ಇಡುತ್ತಾ, ನೀರು ಕೆಳಗೆ ಧುಮುಕುವೆಡೆಗೆ ಸಾಗಿದೆ. ತುಸು ಎಚ್ಚರ ತಪ್ಪಿದರೂ, ನಯವಾದ ಬಂಡೆಗಳ ನಡುವೆ ಜಾರುವುದು ಖಂಡಿತ, ಜಾರಿದರೆ ಹರಿಯುತ್ತಿರುವ ನೀರಿನೊಡನೆ ನಾನೂ ಸಹ ಪಾತಾಳದಲ್ಲಿ ಇರುತ್ತೇನೆ.

" ನಾನೂ ಸಹ ಪಾತಾಳದಲ್ಲಿ", ಅಂದರೆ ಮನೂ ಈಗ ಕೆಳಗೆ ಬಿದ್ದು ಹೋಗಿದ್ದಾನೆ. ಯೋಚಿಸಿ ಮೈ ನಡುಗಿತು.

" ಇಲ್ಲ ಇಲ್ಲ, ಇಲ್ಲೇ ಎಲ್ಲೋ ಇರುತ್ತಾನೆ, ಯಾವುದೋ ಬಂಡೆಯ ಸಂದಿನಲ್ಲೋ, ಅಲ್ಲಲ್ಲಿ ಬೆಳೆದಿರುವ ಗಿಡಗಂಟಿಗಳ ಆಸರೆಯಾಗಿ ಹಿಡಿದುಕೊಂಡೋ ಇರುತ್ತಾನೆ", ಸುಳ್ಳು ಸಮಾಧಾನ ಮಾಡಿಕೊಂಡು, ಮನು ಕೆಳಗೆ ಜಾರಿದ್ದ ಹರಿವಿನ ಬಳಿಗೆ ಬಂದೆ. ಒಣಗಿದ ಒಂದು ವಿಶಾಲವಾದ ಬಂಡೆಯ ಮೇಲೆ ಬೋರಲಾಗಿ ಮಲಗಿ ಕೆಳಗೆ ನೋಡಿದೆ.

ಎದೆ ನಡುಗಿತು, ತಳವೇ ಇಲ್ಲವೇನೋ ಎನ್ನುವಂತಿತ್ತು ಪ್ರಪಾತ. ಕಣ್ಣು ಕತ್ತಲಿಟ್ಟುಕೊಂಡು ಬರುವಂತಾಯಿತು. ಕೆಲ ಕ್ಷಣಗಳು ದಿಟ್ಟಿಸಿ ನೋಡಿದ ನಂತರ, ನಿಧಾನವಾಗಿ ಕೆಳಗಿನ ನೀಲ ನೀರಿನ ಮಡು ಕಂಡಿತ್ತು. ಮನು ಜಾರಿದ್ದ ಜಾಗದೆಡೆ ನೋಡಿದೆ. ಇಲ್ಲಿಂದ ನೇರವಾಗಿ ಕೆಳಗಿದ್ದ ಮಡುವಿಗೇ ಕಟ್ಟಿದಂತಿದ್ದ ಬಂಡೆ. ನಡುವಲ್ಲಿ ಅಡೆತಡೆಯೇ ಇಲ್ಲ. ಇಲ್ಲಿಂದ ಏನೇ ಬಿದ್ದರೂ ನೇರ ಮಡುವಿನೊಳಗೆ.

ಅಂದರೆ ಮನು ಇನ್ನಿಲ್ಲ. ಎರಡು ನಿಮಿಷಗಳ ಹಿಂದೆ ನನ್ನೊಡನೆ ಇದ್ದ ಮನು ಇನ್ನು ಬರುವುದಿಲ್ಲ. ಸತ್ಯವನ್ನು ಈಗ ಒಪ್ಪಿಕೊಳ್ಳಲೇ ಬೇಕಾಯಿತು. ಭಯ ಆವರಿಸಿ, ಎದೆಯಲ್ಲಿ ನೋವುಂಟಾಯಿತು.

ಬಿಕ್ಕಿ ಬಿಕ್ಕಿ ಅತ್ತೆ, ಜೋರಾಗಿ ರೋಧಿಸಿದೆ. ಯಾಕೆ, ಏನು ಎಂದು ಕೇಳುವವರು ಯಾರೂ ಇಲ್ಲ.

"ನಿಜವೇ ಇದೆಲ್ಲಾ? ಕನಸಲ್ಲವಾ? ದೇವರೇ, ಮನು ಜಾರಿ ಬಿದ್ದಿದ್ದು ಕನಸಾಗಿರಲಿ" ಎನ್ನುತ್ತಾ ನನ್ನನ್ನೇ ಚಿವುಟಿಕೊಂಡೆ, ನೋವಾಯಿತು, ಅಂದರೆ.....

ಏನು ಮಾಡಲಿ ಮುಂದೆ ನಾನು, ಕೆಳಗಿಳಿದು ಹೋಗಿ, ಮನುವನ್ನು ಹುಡುಕಬೇಕು. ಕೆಳಗಿಳಿಯಬೇಕೆಂದರೆ, ಜಲಪಾತದ ಎದಿರುಬದಿಗೆ ಹೋಗಬೇಕು. ಜಲಪಾತ ವೀಕ್ಷಿಸಲು ಕಟ್ಟಿರುವ ಕಟಾಂಜನದ ಬಳಿಯಿರುವ ಮೆಟ್ಟಿಲಿನಿಂದ ಕೆಳಗೆ ಹೋಗಬಹುದಂತೆ. ಈಗ ಆ ಬದಿಗೆ ತಲುಪಲೇ ಒಂದು ಗಂಟೆ ಬೇಕಾದೀತು. ಅಷ್ಟು ಹೊತ್ತಿಗೆ ಮನುವಿನ ದೇಹ ನೀರಿನಲ್ಲಿ ಕೊಚ್ಚಿ ಹೋಗಿದ್ದರೆ?

ಜಲಪಾತದ ಈ ಬದಿಗೆ ಬರಲೇ ಬಾರದಿತ್ತು, ಅಲ್ಲೇ ನಿಂತು ನೋಡಿದ್ದರೆ ಸಾಕಿತ್ತು. ಬೇಡ ಬೇಡ ಎಂದರೂ ಮನು ಕೇಳಲಿಲ್ಲ. ಪ್ರವಾಸೀ ಬಂಗಲೆ ಇರುವ ಕಡೆಗೆ ಹೋಗೋಣ ಬಾ ಎಂದು ಬಲವಂತ ಮಾಡಿದ. ಇಲ್ಲಿ ಬಂದದಕ್ಕೇ ಅವನು ಕೆಳಗೆ ಬಿದ್ದಿದ್ದು, ಛೇ ಅವನು ಗಲಾಟೆ ಮಾಡಿರದಿದ್ದರೆ ಹೀಗಾಗುತ್ತಿರಲಿಲ್ಲ.

ಆದರೆ ಅವನನ್ನು ಇದೇ ಜಲಪಾತಕ್ಕೆ ಹೋಗಬೇಕೆಂದು ಹಠ ಹಿಡಿದು ಕರೆದುಕೊಂಡು ಬಂದವನು ನಾನಲ್ಲವೇ?

ಮುಂದಿನ ಪುಟ ನೋಡಿ ...

ಈಗ ನೀರಿಲ್ಲವಂತೆ, ಬರೀ ಬಂಡೆಗಳ ನೋಡೋದಕ್ಕೆ ಅಷ್ಟು ದೂರ ಹೋಗ್ಬೇಕ ಅಂತ ಮನು ಹಿಂದೇಟು ಹಾಕಿದರೂ ಬಿಡದೆ, ಒತ್ತಾಯಿಸಿ ಹೊರಡಿಸಿದೆ. ಪಾಪ ಒಳ್ಳೆಯವನು, ಅದರಲ್ಲೂ ನಾನೆಂದರೆ, ವಿಶೇಷ ಪ್ರೀತಿ, ಸಲುಗೆ. ಅವನ ಮನೆಯವರಿಗೂ ಅಷ್ಟೇ, ಅದರಲ್ಲೂ ಅವನ ಅಮ್ಮ... ಅವರಿಗೆ ಸಾಲಾಗಿ ಮೂರು ಹೆಣ್ಣು, ಕಡೆಯದಾಗಿ ಒಂದು ಗಂಡು. ಮನು ತಂದೆಯನ್ನು ಕಾಣಲೇ ಇಲ್ಲ. ಹೆಣ್ಣು ಮಕ್ಕಳು ಚೆನ್ನಾಗಿ ಓದಿ ಕೆಲಸಗಳ ಹಿಡಿದ ನಂತರ, ಕಷ್ಟ ಪಟ್ಟು ದುಡಿದು ಸಾಕಿದ ಅಮ್ಮನನ್ನು ಮಗುವಿನಂತೆ ನೋಡಿಕೊಂಡಿದ್ದರು. ಮನುವನ್ನು ಅತಿ ಮುದ್ದಿನಿಂದ ಬೆಳೆಸದೆ, ಅವನಿಗೆ ಬದುಕಿನಲ್ಲಿ ಎದುರಿಸಬೇಕಾದ ಕಷ್ಟಗಳ ಅರಿವಿರುವಂತೆ, ತಾಯಿ ಮತ್ತು ಅಕ್ಕಂದಿರು ಎಚ್ಚರ ವಹಿಸಿದ್ದರು.
ಅವರ ಮನೆಯಲ್ಲಿ ಮುಕ್ತ ವಾತಾವರಣ, ಕಟ್ಟುಪಾಡುಗಳು ಕಡಿಮೆ. ಅವರ ಮನೆಯಲ್ಲಿ ದೇವರನ್ನು ಪೂಜಿಸಿದ್ದೇ ಕಾಣೆ. ಆ ನಾಲ್ಕು ಜನ ಮಕ್ಕಳಿಗೂ ಅಮ್ಮನೇ ದೇವರು. ಮನುವಂತೂ, ಅಮ್ಮನನ್ನು ಯಾವ ಯಾವ ರೀತಿಯಲ್ಲಿ ಸುಖವಾಗಿಡಬಹುದೆಂದು ಸದಾ ಯೋಚಿಸುತ್ತಿದ್ದ.
ನಾನು ಅವನು ಸದಾ, ಅಲ್ಲಿ ಇಲ್ಲಿ ಹೋಗುತ್ತಲೇ ಇರುತ್ತಿದ್ದೆವು. ನನ್ನ ಜೊತೆ ಬಂದರೆ ಅವರಿಗೆಲ್ಲಾ ಒಂದು ರೀತಿಯ ನೆಮ್ಮದಿ. "ನೀನು ಬೇರೆಯವರ ಹಾಗೆ ತರಲೆ ಹುಡುಗನಲ್ಲ, ಅವನ ಜೊತೆಗೆ ನೀನಿದ್ದರೆ, ನಾವಿಲ್ಲಿ ನಿಶ್ಚಿಂತೆಯಿಂದ ಇರಬಹುದು", ಎನ್ನುತ್ತಿದ್ದರು ಅವರಮ್ಮ.
ಈಗ ನಾನವರಿಗೆ ಏನೆಂದು ಹೇಳಲಿ? ಹೇಗೆ ಮುಖ ತೋರಿಸಲಿ? ಆ ತಾಯಿಯ ಹೃದಯ ಹೇಗೆ ತಡೆದೀತು? ಸುದ್ದಿ ಕೇಳಿ ಅವರ ಪ್ರಾಣವೂ ಹೋದರೆ, ಮೈ ನಡುಗಿತು.
"ಇಲ್ಲ ಇದಾದದ್ದು ನನ್ನಿಂದಲೇ, ಅವನು ಹೇಳಿದಂತೆ ಬೇರೆಲ್ಲಾದರೂ ಹೋಗಿದ್ದರೆ ಹೀಗಾಗುತ್ತಿರಲಿಲ್ಲ. ಅವರುಗಳ ಎದುರೇ ಬಲವಂತ ಮಾಡಿ ಅವನನ್ನು ಹೊರಡಿಸಿದ್ದೆ, ಏನುತ್ತರ ಕೊಡಲಿ ಈಗ.
ನಾನವರಿಗೆ ಮುಖ ತೋರಿಸಲಾರೆ, ಅವನನ್ನು ಬಿಟ್ಟು ಹಿಂದಿರುಗಿ ಹೋಗಲಾರೆ. ಇರುವುದೊಂದೇ ದಾರಿ....
ಹೌದು, ನಾನೂ ಅವನೊಟ್ಟಿಗೆ ಹೋಗುವುದು. ಅವನು ನನ್ನ ಪ್ರಾಣ ಸ್ನೇಹಿತ, ಪ್ರಾಣವನ್ನೂ ಒಟ್ಟಿಗೇ ಕಳೆದುಕೊಳ್ಳಬೇಕೆಂದು ಬರೆದಿತ್ತೇನೋ",
ಮತ್ತೆ ಯೋಚಿಸದೆ ಅವನು ಜಾರಿದ್ದ ನೀರಿನ ಹರಿವಿನ ಕಡೆಗೆ ನಡೆದೆ. ಜಾರುತ್ತಿದ್ದ ಬಂಡೆಗಳು, ಮೊನಚಾದ ಕಲ್ಲುಗಳ ಲೆಕ್ಕಿಸದೆ ಹೆಜ್ಜೆ ಇಡುತ್ತಿದ್ದಾಗ, ಅಷ್ಟು ಹೊತ್ತೂ ಮರೆಯಲ್ಲಿದ್ದ ರಾಜೀವ ಧುತ್ತೆಂದು ಕಾಣಿಸಿದ. ಛಳಿ ಜ್ವರ ಬಂದ ಹಾಗೆ ಮೈ ನಡುಗಲಾರಂಭಿಸಿತು.
"ಮನೂ.... ಮನೂ..... ಬೇಗ ಬಾ", ಕಣ್ಣು ಮುಚ್ಚಿಕೊಂಡು ಹುಚ್ಚನಂತೆ ಕೂಗಿದೆ.
ಕಣ್ಣು ತೆಗೆದು ರಾಜೀವನ ಕಡೆ ನೋಡಲು ಭಯವಾಗುತ್ತಿತ್ತು.
"ಮನೂಗೆ ಹೇಳಿದೆ, ನನ್ನ ಹತ್ತಿರ ಬರಬೇಡ ಅಂತ, ಅವನು ನನ್ನ ಮಾತು ಕೇಳಲಿಲ್ಲ. ಅವನ ಸಾವಿಗೆ ಕಾರಣ ನೀನಲ್ಲ, ನಾನು. ಈಗ ನನ್ನಿಂದಾಗೇ ನೀನೂ ಸಾಯ್ತೀಯ", ರಾಜೀವ ಗಹಗಹಿಸಿ ನಗುತ್ತಾ ನುಡಿದಂತಾಯ್ತು.
ಮೆಲ್ಲನೆ ಕಣ್ತೆರೆದು ನೋಡಿದೆ. ಗಾಳಿಗೆ ಹೋಯ್ದಾಡುತ್ತಿದ್ದ ನೀರಿನ ಅಲೆಗಳೊಡನೆ ತೇಲಾಡುತ್ತಿದ್ದ ರಾಜೀವ, ನಿರ್ಜೀವವಾಗಿ.

ದು:ಖ ಉಕ್ಕಿ ಬಂತು, "ಹೌದು, ನೀನೇ ಕಾರಣ, ನಿನ್ನಿಂದಲೇ ಇಷ್ಟೆಲ್ಲಾ ಆಗಿದ್ದು. ಎಲ್ಲರೂ ನಿನ್ನ ಬಗ್ಗೆ ಮಾತಾಡೋದು ನಿಜ ಅಂತ ನಿರೂಪಿಸಿ ಬಿಟ್ಟೆ. ಸ್ವಲ್ಪ ಹೊತ್ತಿಗೆ ಮುಂಚೆ ಎಷ್ಟು ಚೆನ್ನಾಗಿತ್ತು, ನೋಡು ಈಗ ಏನಾಯ್ತು. ಥೂ, ನೀನಿಲ್ಲೇ ಬಂದು ಸಾಯ್ಬೇಕಿತ್ತ..."

****

ಹೌದು, ನಾನೂ, ಮನೂ, ಎಷ್ಟು ಸಂತೋಷದಿಂದ ಹೊರಟು ಬಂದಿದ್ದೆವು. ಜೋಗ, ಕಾರವಾರ, ಗೋಕರ್ಣ ಎಲ್ಲಾ ನೋಡಿಕೊಂಡು ಹೋಗೋಣ ಎಂದು ಕೊಂಡಿದ್ದೆವು.
ಬಸ್ಸು ಘಟ್ಟವನ್ನಿಳಿಯುವಾಗ, ಆಕಾಶದ ನಕ್ಷತ್ರಗಳೆಲ್ಲಾ ಕೆಳಗೆ ಬಿದ್ದು ಹರಡಿದಂತೆ ಇದ್ದಕ್ಕಿದ್ದ ಹಾಗೆ ದೀಪಗಳ ರಾಶಿ ಗೋಚರಿಸಿತ್ತು. ಕಿಟಕಿಯಲಿ ಮುಖವಿಟ್ಟು, ಅರಣ್ಯದ ಕಂಪು ಮಿಶ್ರಿತ ತಂಗಾಳಿಯನ್ನನುಭವಿಸುತ್ತಾ, ಹಾವಿನಂತೆ ಕೆಳಗಿಳಿಯುತ್ತಿದ್ದ ರಸ್ತೆಯಿಂದಾಗಿ ಕಣ್ಣಾಮುಚ್ಚಾಲೆ ಆಡುತ್ತಿದ್ದ ದೀಪಗಳ ಗೊಂಚಲನ್ನು, ಏನಿರಬಹುದದು ಎಂದು ನೋಡುತ್ತಿದ್ದೆ.
ಸಂಪೂರ್ಣ ಕೆಳಗಿಳಿದ ಬಸ್ಸು ನಿಂತಾಗ, ನಿದ್ದೆ ಹೊಡೆಯುತ್ತಿದ್ದ ಮನುವನ್ನು ಎಳೆದುಕೊಂಡು ಕೆಳಗಿಳಿದೆ. ಬಸ್ಸು ಮುಂದೆ ಹೋದ ಮೇಲೆ ನೋಡಿದರೆ, ಅಲ್ಲಿ ಒಂದು ಬಸ್ ನಿಲ್ದಾಣ ಮತ್ತು ಒಂದು ಹೋಟೆಲ್ ಬಿಟ್ಟರೆ ಬೇರೇನಿಲ್ಲ.
"ಎಲ್ಲಿಗೋ ಕರ್ಕೋಂಡ್ ಬಂದೆ, ಯಾವ್ದೋ ಕಾಡಲ್ಲಿ ಇಳ್ಸಿದ್ದೀಯ. ನನ್ನ ನಿದ್ದೆ ಎಲ್ಲಾ ಹಾಳ್ಮಾಡ್ದೆ", ಗೊಣಗಿಕೊಂಡು ಮನೂ ಹೋಟೆಲ್ ಕಡೆಗೆ ನಡೆದ.
ಒಂದು ಗಂಟೆ ಕಾಲ ಕಾದ ಮೇಲೆ ಹೋಟೆಲ್ ಬಾಗಿಲು ತೆಗೆದು, ಬಿಸಿ ಬಿಸಿ ಕಾಫಿ ಕುಡಿದಾಗ ಸಮಯ ಇನ್ನೂ ಬಳಗಿನ ಜಾವ ೫.೩೦.

ಮುಂದಿನ ಪುಟ ನೋಡಿ ...

"ಇಲ್ಲಿಂದ ಬರೀ ನಾಲ್ಕೈದು ಕಿಲೋಮೀಟರ್ ಅಷ್ಟೇ ಜೋಗ, ಇಷ್ಟು ಚೆನ್ನಾಗಿರೋ ವಾತಾವರಣ, ಚೆಂದದ ಪ್ರಕೃತಿ, ಎಲ್ಲಿ ಸಿಗುತ್ತೆ ಹೇಳು", ಎನ್ನುತ್ತಾ ಅವನನ್ನು ಹುರಿದುಂಬಿಸಿದೆ.

ಹಚ್ಚ ಹಸಿರಿನ ಬಯಲು, ಮುಗಿಲ ಮುಟ್ಟುವ ವೃಕ್ಷಗಳು, ಬೆಳಗಿನ ಸೂರ್ಯನ ಹೊಂಬೆಳಕಿಗೆ ತಾವೂ ಹೊಂಬಣ್ಣ ತಾಳಿದ್ದವು. ಮರಗಳ ನಡುವಿನಿಂದ ತೂರಿ ಬರುತ್ತಿದ್ದ ಹೊನ್ನಿನ ಬಣ್ಣದ ಎಳೆ ಬಿಸಿಲಿನ ಚಿತ್ತಾರಗಳು, ನೇಸರನು ಸೃಷ್ಟಿಸಿದ ದೃಶ್ಯಕಾವ್ಯದಂತಿತ್ತು. ಚುಮು ಚುಮು ಚಳಿ ಮತ್ತು ಹಿತವಾದ ಬಿಸಿಲು, ಎರಡನ್ನೂ ಒಟ್ಟಿಗೆ ಅನುಭವಿಸುತ್ತಾ ಜಲಪಾತದಡೆಗೆ ಹೆಜ್ಜೆ ಹಾಕಿದೆವು.

ಜಗತ್ಪ್ರಸಿದ್ಧ ಜಲಪಾತದ ಸದ್ದು ಭೋರ್ಗರೆಯುತ್ತಾ ಕೇಳುತ್ತದೆ ಎಂದು ಕೊಂಡಿದ್ದ ನಮಗೆ, ನೀರವ ಮೌನ ನಿರಾಸೆ ಹುಟ್ಟಿಸಿತ್ತು. ಆದರೂ ಓಡುತ್ತಾ ಹೋಗಿ ಜಲಪಾತದ ಎದುರು ನಿಂತೆವು.

ಹರ್ಷದ ಧಾರೆಯಾಗಿ ಧುಮ್ಮಿಕ್ಕಬೇಕಿದ್ದ ಜಲಪಾತ, ದುಃಖದಿಂದ ಕಣ್ಣೀರ ಹರಿಸುತ್ತಿರುವಂತಿತ್ತು. ಹಾವಿನ ಪೊರೆಯಂತೆ ತೆಳ್ಳಗೆ, ಬಂಡೆಗಳಿಗಳಿಗೆ ಅಂಟಿಕೊಂಡು ಕೆಳಗಿಳಿಯುತ್ತಿತ್ತು ನೀರು.

ಮನುಷ್ಯನ ಆಲೋಚನೆಗಳು ಎಷ್ಟು ವೈವಿಧ್ಯ. ಈ ಜಲಪಾತ ಒಬ್ಬರ ಕಣ್ಣಿಗೆ ಪ್ರಕೃತಿಯ ನಡುವೆ, ಸೌಂದರ್ಯದ ಖನಿಯಾಗಿ ಕಂಡರೆ, ಮತ್ತೊಬ್ಬರ ಕಣ್ಣಿಗೆ ನಿರರ್ಥಕವಾಗಿ ವ್ಯಯವಾಗುತ್ತಿರುವ ಅಗಾಧ ಶಕ್ತಿಯ ಮೂಲವಾಗಿ ಕಂಡಿದೆ.

ನೀರಿಲ್ಲದಿದ್ದರೂ, ಅಲ್ಲಿನ ಪ್ರಕೃತಿ ಸೌಂದರ್ಯ ಮೈ ಮರೆಯುವಂತೆ ಮಾಡಿತ್ತು. ಹಚ್ಚ ಹಸಿರಿನ ದಟ್ಟ ಅಡವಿಯ ಕಣಿವೆ, ಕಣ್ಣಿಗೆ ಕಾಣುವಷ್ಟು ದೂರಕ್ಕೂ ಹಬ್ಬಿತ್ತು. ನಡುವಲ್ಲಿ ಫಳ ಫಳ ಮಿರುಗುತ್ತಾ ಹರಿದಿದ್ದ ನದಿ, ಕಣಿವೆಯಿಂದಲೇ ಎದ್ದು ಬರುತ್ತಿದ್ದ ಬಿಳಿ ಮೋಡಗಳು. ಜೊತೆಗೆ ಸೂರ್ಯನೊಂದಿಗೆ ಕಣ್ಣಾಮುಚ್ಚಾಲೆ ಆಡುತ್ತಾ ನಿಮಿಷಕ್ಕೊಮ್ಮೆ ಮಳೆಯನ್ನು ಸುರಿಸುತ್ತಾ ಓಡುತ್ತಿರುವ ಮೋಡಗಳು, ಧರೆಯ ಮೇಲಿನ ಸ್ವರ್ಗವನ್ನೇ ಸೃಷ್ಟಿಸಿತ್ತು. ಅಗಣಿತ ಸಸ್ಯ ಸಂಕುಲದ ತೊಟ್ಟಿಲು ಈ ನಮ್ಮ ಪಶ್ಚಿಮ ಘಟ್ಟಗಳು, ಅದರ ನಡುವಲ್ಲಿ ನಾನು ನಿಂತಿದ್ದೇನೆ, ಎಂದು ಮೈ ಪುಳಕಗೊಂಡಿತು.

"ಏನು, ಸಾಹೇಬ್ರು, ಹಾಗೆ ನಿಂತು ಬಿಡ್ತೀರಾ, ಅಥವಾ ಮುಂದಕ್ಕೇನಾದ್ರೂ ಪ್ಲಾನ್ ಮಾಡ್ತೀರಾ?" ಎಂದು ಮನು ಭುಜ ಹಿಡಿದು ಅಲ್ಲಾಡಿಸಿದಾಗ, ಹೊರಗಿನ ಲೋಕಕ್ಕೆ ಬಂದಿದ್ದೆ.

"ಕೆಳಗಿಳಿದು ಗುಂಡಿ ಹತ್ತಿರ ಹೋಗೋಣ, ಚೆನ್ನಾಗಿರುತ್ತೆ, ಮೋಡಗಳ ಒಳಗೇ ಹೋಗಬಹುದು", ಎಂದೆ.

"ಕೆಳಗಿಳಿದು ಅದರ ಮಜಾ ನೋಡ್ಬೇಕೂಂದ್ರೆ, ಫಾಲ್ಸಲ್ಲಿ ತುಂಬಾ ನೀರಿರ್ಬೇಕು. ಆ ನೀರಿನ ಎರಚಲು, ಆ ಭೋರ್ಗರೆಯುವ ಶಬ್ಧ, ಹಾಲಿನ ಧಾರೆಯಂತ ನೀರು, ಅದರಲ್ಲೇ ಮೂಡಿ ಮಾಯವಾಗುವ ಕಾಮನಬಿಲ್ಲು, ಆ ಚೆಂದಾನೇ ಚೆಂದ, ಅದರ ಬದಲು ಆ ಕಡೆ ಹೋಗೋಣ ಬಾ. ನೀರು ಕೆಳಗೆ ಬೀಳೋದು ಮೇಲಿಂದ ನೋಡೋಕೆ ಚೆನ್ನಾಗಿರುತ್ತೆ". ಎಂದಿದ್ದ ಮನು.

"ಹೋಗೋ, ಅದೇನ್ ಚೆನ್ನಾಗಿರುತ್ತೆ, ಅದೂ ಅಲ್ಲದೆ ಅಲ್ಲೀ ತನಕ ಬೇರೆ ನಡೀಬೇಕು", ನಾನೆಂದೆ.

ಆದರೂ ಬಲವಂತ ಮಾಡಿ ಈ ಕಡೆಗೆ ಕರೆದುಕೊಂಡು ಬಂದ.

ಅದೂ ಒಂದು ರೀತಿಯ ಮಜವೇ ಇತ್ತು. ಎಲ್ಲೆಲ್ಲೋ ಹರಿದು ಬರುವ ನೀರು, ಕಡೆಗೆ ನಾಲ್ಕು ಭಾಗಗಳಾಗಿ ಬೀಳುವ ಪರಿ ಸೋಜಿಗ ಮೂಡಿಸಿತ್ತು. ಅವನೊಂದು ಕಡೆ, ನಾನೊಂದು ಕಡೆ ಸೊಬಗನ್ನು ಸವಿಯುತ್ತಾ ಫೋಟೋಗಳನ್ನು ತೆಗೆಯುತ್ತಿದ್ದೆವು.

"ಚಂದೂ.., ಚಂದೂ ಬೇಗ ಬಾ ಇಲ್ಲಿ," ಇದ್ದಕ್ಕಿದ್ದ ಹಾಗೆ ಮನು ಕೂಗಿದ.

"ಎಲ್ಲೋ ಇದ್ದೀಯ?" ಎಂದು ಹುಡುಕುತ್ತಾ ಬಂಡೆಗಳ ನಡುವೆ ನಡೆದೆ. ಮುಂದೆ ತಲೆಯ ಮೇಲೆ ಕೈ ಇಟ್ಟು, ದೊಡ್ಡದಾಗಿ ಮಡುಗಟ್ಟಿದ ನೀರಿನ ಬಳಿ ಕುಳಿತಿದ್ದ.

"ಏನಾಯ್ತು ಮನು, ತಲೆ ತಿರುಗಾ..", ಎನ್ನುತ್ತಾ ಹತ್ತಿರ ಹೋದೆ. ಮಾತನಾಡಲಿಲ್ಲ, ಮುಖ ದುಃಖದಿಂದ ಕೂಡಿತ್ತು.

"ಯಾಕೋ, ಏನಾಯ್ತು ಹೇಳು? ಮತ್ತೆ ಕೇಳಿದೆ.

ಮಾತನಾಡಲಿಲ್ಲ, ನೀರಿನ ಕಡೆ ಕೈ ತೋರಿಸಿದ.

ದೇಹವೊಂದು ನಿಂತ ನೀರಿನ ಅಲೆಗಳೊಡನೆ ಹೊಯ್ದಾಡುತ್ತಿತ್ತು. ಪ್ರಶಾಂತವಾಗಿ ನಿದ್ರಿಸುತ್ತಿರುವ ಹಾಗಿದ್ದ, ಸುಮಾರು ನಮ್ಮದೇ ವಯಸ್ಸಿನ ಗಂಡಸು. ಅದುವರೆವಿಗೂ ಎಂದೂ ಅಷ್ಟು ಹತ್ತಿರದಿಂದ ಮೃತ ದೇಹವನ್ನು ಕಂಡಿರದ ನನಗೆ ಮೈಯೆಲ್ಲಾ ಬಿಸಿಯಾಗಿ, ಬೆವರಲಾರಂಭಿಸಿದ್ದೆ.

"ಮನೂ ಏನೋ ಇದೂ...," ಅಷ್ಟು ಹೊತ್ತು ಇದ್ದ ಉಲ್ಲಾಸದ ವಾತಾವರಣ ತಟ್ಟನೆ ಮರೆಯಾಗಿ, ಇಬ್ಬರೂ ಸಿಡಿಲು ಹೊಡೆದವರಂತೆ ಗರಬಡಿದು ಕುಳಿತೆವು.

ಎವೆಯಿಕ್ಕದೇ ದೇಹವನ್ನೇ ಕೆಲಕಾಲ ಗಮನಿಸಿದೆ, ಏನಾದರೂ ಬದುಕಿರುವ ಸುಳಿವು ಕಾಣಬಹುದೇನೋ ಎಂದು.

"ಮನೂ, ಒಂದು ಸಲ ನೋಡೋ, ಅಕಸ್ಮಾತ್ ಇನ್ನೂ ಜೀವ ಇರಬಹುದೇನೋ ಅಂತ," ಎಂದ ನನ್ನ ಮಾತಿಗೆ ಮನು ಇಲ್ಲ ಎಂಬಂತೆ ತಲೆಯಾಡಿಸಿದ.

ಮುಂದಿನ ಪುಟ ನೋಡಿ ...

ಕೆಲಕಾಲ ಮೌನದ ನಂತರ ಹೇಳಿದೆ,"ಎಲ್ಲೋ ನದೀನಲ್ಲಿ ಕಾಲು ಜಾರಿ ಬಿದ್ದು ಇಲ್ಲಿಯವರೆಗೂ ಬಂದಿರಬೇಕು, ಪಾಪ ಯಾರೋ ಏನೋ? ಮನೆಯವರೆಲ್ಲ ಅದೆಷ್ಟು ಹುಡುಕ್ತಾ ಇರ್ತಾರೋ?".

"ಕಾಲು ಜಾರಿ ಬಿದ್ದಿರೋದಲ್ಲ, ಇದು ಆತ್ಮಹತ್ಯೆ", ನಿಧಾನವಾಗಿ ಮನು ಹೇಳಿದ.

ನನಗೆ ಆಶ್ಚರ್ಯವಾಯಿತು, "ನಿನಗೆ ಹೇಗೆ ಗೊತ್ತು, ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಅಂತ. ಏನಾದ್ರೂ ಚೀಟಿಗೀಟಿ ಸಿಕ್ಕಿತಾ?".

"ಅದೆಲ್ಲಾ ಏನೂ ಇಲ್ಲ, ಆದ್ರೆ ನಂಗೊತ್ತು ಇದು ಆತ್ಮಹತ್ಯೇನೆ ಅಂತ, ಯಾಕೇಂದ್ರೆ ಇವನು ನನ್ನ ಗೆಳೆಯ ರಾಜೀವ".

ನನಗೆ ಮತ್ತೂ ಆಘಾತವಾಯಿತು "ಹೌದಾ! ನೀನು ಹೇಳ್ತಾ ಇದ್ದ ರಾಜೀವನೇನಾ ಇವನು, ಆತ್ಮಹತ್ಯೆ ಮಾಡ್ಕೊಳೋ ಅಂತಾದ್ದೇನಾಗಿತ್ತೋ ಪಾಪ".

"ಅವನಿಗೇನೂ ಆಗಿರಲಿಲ್ಲ, ಚೆನ್ನಾಗಿಯೇ ಇದ್ದ. ಆದರೆ ಅವನ ಸುತ್ತಲಿನ ಜನ ಅವನನ್ನು ಬಲಿಪಶುವಾಗಿ ಮಾಡಿಬಿಟ್ಟರು."

"ಅಲ್ಲ, ನೋಡೋಕೆ ಲಕ್ಷಣವಾಗಿದ್ದಾನೆ, ಚೆನ್ನಾಗಿ ಓದಿದ್ದಾನೆ, ಒಳ್ಳೆ ಕೆಲಸದಲ್ಲಿ ಇದ್ದಾನೆ ಅಂತೆಲ್ಲ ಹೇಳ್ತಾ ಇದ್ದೆ, ಆದರೆ ಈ ರೀತಿ ಯಾಕೆ ಮಾಡ್ಕೊಂಡ".

"ಬುದ್ಧಿ ಇರಲಿಲ್ಲ ಮುಠ್ಠಾಳಂಗೆ, ಅದಕ್ಕೇ. ನಾನು ಎಷ್ಟು ಹೇಳ್ದೆ ಅವರಿವರ ಮಾತಿಗೆ ಬೆಲೆ ಕೊಡಬೇಡ, ನೀನು ಒಳ್ಳೆ ವಿದ್ಯಾವಂತ, ಸ್ವಲ್ಪ ಯೋಚನೆ ಮಾಡು, ನಿನ್ನ ಜೀವನ ನೀನೇ ಹಾಳು ಮಾಡ್ಕೋಬೇಡ ಅಂತ, ಕೇಳ್ಲಿಲ್ಲ. ಕಡೇಗೂ ಇವನ ಜೀವನಾನೇ ಬಲಿ ತೆಗೆದುಕೊಂಡು ಬಿಟ್ಟರು," ಮನು ಹೇಳುತ್ತ ಹೇಳುತ್ತಾ ಬಿಕ್ಕಿ ಬಿಕ್ಕಿ ಅತ್ತ.

ಅವನ ಭುಜದ ಮೇಲೆ ಕೈ ಇಟ್ಟು ಸಮಾಧಾನ ಮಾಡಲೆತ್ನಿಸುತ್ತಾ, " ಯಾಕೆ, ಯಾರು ಏನು ಮಾಡಿದ್ರು ಇವನಿಗೆ," ಎಂದೆ.

ಮನು ಒಂದೆರಡು ನಿಮಿಷಗಳ ಕಾಲ ಸುಮ್ಮನಿದ್ದು, ನಂತರ ರಾಜೀವನ ಕಥೆ ಆರಂಭಿಸಿದ.

****

ರಾಜೀವನ ಊರು ತೀರ ಹಿಂದುಳಿದ ಒಂದು ಹಳ್ಳಿ. ಮದುವೆಯಾದ ಬಹಳ ವರ್ಷಗಳ ನಂತರ, ನಡು ವಯಸ್ಸಿನಲ್ಲಿ ಬಸುರಿಯಾಗಿದ್ದ ರಾಜೀವನ ತಾಯಿ, ಹೆರಿಗೆಗಾಗಿ ತವರಿಗೆ ಬಂದಿದ್ದರು. ತೀರ ಮಡಿ ಮೈಲಿಗೆ, ಕಟ್ಟು ನಿಟ್ಟು, ಶಾಸ್ತ್ರ, ಜ್ಯೋತಿಷ್ಯ ಎಂದೆಲ್ಲಾ ಪಾಲಿಸುತ್ತಿದ್ದ ಕುಟುಂಬಗಳು ಅಲ್ಲೆಲ್ಲ. ಹೆರಿಗೆಯಲ್ಲಿ ವಿಪರೀತ ತೊಂದರೆ ಅನುಭವಿಸುತ್ತಿದ್ದರೂ, ಆಸ್ಪತ್ರೆ, ಡಾಕ್ಟರ್ ಎಂದು ಯೋಚಿಸದೆ, ಮನೆಯಲ್ಲೇ ಇಟ್ಟುಕೊಂಡು, ಮಂತ್ರ, ತಾಯಿತಗಳಿಗೆ ಮೊರೆ ಹೋಗಿ ಮಗು ಮಾತ್ರ ಬದುಕುಳಿಯಿತು.

ಮಗುವಿನ ಸೋದರಮಾವ ತಾನು ಕಲಿತ ಶಾಸ್ತ್ರ ಮತ್ತು ಜ್ಯೋತಿಷ್ಯ ವಿದ್ಯೆಗಳನ್ನೆಲ್ಲಾ ಬಳಸಿ, ತಾಯಿಯ ಸಾವಿಗೆ ಮಗುವಿನ ಜಾತಕವೇ ಕಾರಣ ಎಂದು ಕಂಡು ಹಿಡಿದಿದ್ದ. ಹೆಂಡತಿಯನ್ನು ಕಳೆದುಕೊಂಡು, ಮಗುವನ್ನು ಕರೆದುಕೊಂಡು ಹೋಗಲು ಬಂದ ಬಾವನಿಗೆ, ಅವರ ಮಗು ಹುಟ್ಟಿದ ಘಳಿಗೆ ಅತಿ ಕೆಟ್ಟದ್ದು, ಅದನ್ನು ಯಾವುದಾದರೂ ಅನಾಥಾಶ್ರಮಕ್ಕೆ ಕೊಟ್ಟುಬಿಡಿ ಎಂದು ಬುದ್ಧಿವಾದ ಮಾಡಿದ.

ಅತಿಯಾಗಿ ಪ್ರೀತಿಸುತ್ತಿದ್ದ ಹೆಂಡತಿಯ ಸಾವಿನಿಂದ ಜರ್ಜರಿತರಾಗಿದ್ದ ಆತ ಮಗುವಿನ ಮೇಲಿನ ಅಪವಾದದಿಂದ ಮತ್ತಷ್ಟು ಹಣ್ಣಾಗಿದ್ದರು. ಊರಿಗೆ ಹಿಂತಿರುಗಿ ಬಂದವರು, ತಮ್ಮ ತಾಯಿಯ ಕೈಗೆ ಮಗುವನ್ನು ಒಪ್ಪಿಸಿ, ತಾವೂ ಹೆಂಡತಿಯನ್ನು ಹಿಂಬಾಲಿಸಿದರು.

"ಅಜ್ಜೀ, ಭಾವಂಗೆ ಹೇಳ್ದೆ, ಆ ಮಗೂದು ಹೀನ ಸುಳಿ, ಮನೆಗ ಕರ್ಕೊಂಡು ಹೋಗ್ಬೇಡೀಂತ, ಕೇಳ್ಲಿಲ್ಲ ನನ್ಮಾತು. ಪ್ರಾರಬ್ಧದ್ದು, ಹುಟ್ತಾನೆ ಅಪ್ಪ ಅಮ್ಮ ಇಬ್ಬರನ್ನೂ ಬಲೀ ತಗಂಡಿದೆ. ಇನ್ನೂ ಒಂದ್ ಹತ್ವರ್ಷ ಇರ್ತೀಯ ನೀನು, ಅದನ್ನ ಎಲ್ಲಾದ್ರೂ ಅತ್ಲಾಗೆ ಸಾಗ ಹಾಕಿ ಕೈ ತೊಳ್ಕೋ", ಎಂದಿದ್ದ ಆ ಸೋದರಮಾವ.

"ಅಯ್ಯೋ, ಆ ಕೂಸಿನ ಬಗ್ಗೆ ಇಂಥಾ ಮಾತಾ ಆಡೋದು, ದೇವರ ಹಾಗೆ ಅದು. ಅದೂ ಅಲ್ಲದೆ ಎಲ್ರೂ ಒಂದಲ್ಲ ಒಂದು ದಿನ ಹೋಗೋದೇನೆ. ಯಾರೂ ಇಲ್ಲೇ ಗೂಟ ಬಡ್ಕೊಂಡು ಕೂತಿರಲ್ಲ. ನಾನಿರೋವರ್ಗೂ ಅವನನ್ನು ನಾ ಸಾಕ್ತೀನಿ ಹೋಗು", ಎಂದು ಅವನನ್ನೇ ಸಾಗಹಾಕಿದ್ದರು.

ಆದರೆ ಆ ಮಾವ ಅಷ್ಟಕ್ಕೇ ಬಿಡದೆ, ಹೋದಕಡೆಯೆಲ್ಲಾ ಮಗುವಿನ ಕೆಟ್ಟ ಜಾತಕದ ಫಲಗಳನ್ನು ವಿಶ್ಲೇಷಿಸಿ, ಯಾರೇ ಆ ಮಗುವಿಗೆ ಹತ್ತಿರವಾದರೂ, ಅವರಿಗೆ ಸಾವು ಕಟ್ಟಿಟ್ಟ ಬುತ್ತಿ ಎಂದು ಪ್ರಚಾರ ನಡೆಸಿದ್ದ. ಸುತ್ತಮುತ್ತಲಿನ ಹಳ್ಳಿಗಳಲ್ಲಿ, ಸಣ್ಣ ಸಣ್ಣ ಪೇಟೆಗಳಲ್ಲಿ ಸಾಕಷ್ಟು ಹೆಸರು ಮಾಡಿದ್ದ ಅವನ ಮಾತನ್ನು ಜನ ನಂಬಿದ್ದರು.

ಆದರೆ ಧೃತಿಗೆಡದೆ ಅಜ್ಜಿ ಮಗುವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು, ತಂದೆ ತಾಯಿ ಎಲ್ಲವೂ ತಾವೇ ಆದರು. ಪ್ರೀತಿಯಿಂದ ರಾಜೀವ ಎಂದು ಕರೆದರು. ವಯಸ್ಸಾಗಿ ಬಹಳಷ್ಟು ಕಾಲ ಹಾಸಿಗೆ ಹಿಡಿದಿರುತ್ತಿದ್ದ ಅಜ್ಜಿ, ಮೊಮ್ಮಗನ ಆಗಮನದ ನಂತರ ಆಶ್ಚರ್ಯಕರ ರೀತಿಯಲ್ಲಿ ಚೇತರಿಸಿಕೊಂಡಿದ್ದರು.

ಅಜ್ಜಿಯ ಹೊರತಾಗಿ, ಬೇರೊಬ್ಬರ ಪ್ರೀತಿಯ ಕಾಣಲಿಲ್ಲ ರಾಜೀವ, ಊರಿನಲ್ಲಿ ನೆಂಟರಿಷ್ಟರು, ಸ್ನೇಹಿತರು ಯಾರೂ ತನ್ನ ಬಳಿ ಸುಳಿಯದಿರಲು, ತುಂಬಾ ನೊಂದುಕೊಳ್ಳುತ್ತಿದ್ದ.

"ಅಜ್ಜಿ, ಹೌದೇನಜ್ಜಿ, ನಂದು ತುಂಬಾ ಕೆಟ್ಟ ಜಾತಕಾನಾ? ಅಪ್ಪ ಅಮ್ಮ ಸತ್ತದ್ದು ನನ್ನ ದೋಷದಿಂದಾಗಿ ಅಂತೆ, ಹೌದಾ ಹೇಳಜ್ಜಿ".

ಮುಂದಿನ ಪುಟ ನೋಡಿ ...

"ಅವರ ಕಾಲ ಮುಗಿದಿತ್ತು, ಅವರು ತೀರ್ಕೊಂಡ್ರು, ಅದಕ್ಕೆ ನೀನು ಹ್ಯಾಗೆ ಕಾರಣ ಆಗ್ತೀಯಪ್ಪ. ಜಾತಕ, ದೋಷ ಎಲ್ಲಾ ಬುದ್ಧಿ ಇಲ್ದೇ ಇರೋರು ಆಡೋ ಮಾತು. ನನ್ನನ್ನೇ ನೋಡು, ನೀನು ಹುಟ್ಟಿದ್ಮೇಲೆ ಕಲ್ಲು ಗುಂಡು ತರಾ ಆಗಿದ್ದೀನಿ. ಇದ್ದ ಕಾಯ್ಲೆ, ಕಸಾಲೆ ಎಲ್ಲಾ ಅದೆಲ್ಲಿಗೆ ಹೋಯ್ತೋ".
ರಾಜೀವನಿಗೆ ಹದಿನೈದು ವರ್ಷಗಳಾದಾಗ ವಯೋ ಸಹಜವಾಗಿ ಅಜ್ಜಿ ಚಿರನಿದ್ರೆಗೆ ಜಾರಿದ್ದರು. ಆಗಲೂ ಮಾವ ಬಂದು, ರಾಜೀವನನ್ನೇ ಅಜ್ಜಿಯ ಸಾವಿಗೆ ಕಾರಣೀಭೂತನನ್ನಾಗಿಸಿ ಹೋಗಿದ್ದ.
ಅಜ್ಜಿ ಎಷ್ಟೇ ಧೈರ್ಯ ತುಂಬಿ ಬೆಳೆಸಿದ್ದರೂ, ರಾಜೀವನಲ್ಲಿ ತನ್ನ ಬಗ್ಗೆ ತನಗೇ ಒಂದು ಕೀಳರಿಮೆ ಬೆಳೆದು ಬಂದಿತ್ತು. ಜನ ಅವನನ್ನು ದೂರವಿಡುವಿದರಲಿ, ಅವನೇ ಚಿಪ್ಪಿನೊಳಗೆ ಸೇರಿ ಹೋಗಿದ್ದ. ಯಾರನ್ನೂ ಆತ್ಮೀಯತೆ ಬೆಳೆಸಿಕೊಳ್ಳುತ್ತಿರಲಿಲ್ಲ. ಹಲವಾರು ಸ್ನೇಹಿತರು ಅವನ ಅಭಿಪ್ರಾಯ ತಪ್ಪೆಂದು ತಿಳಿಸಿ, ಅವನನ್ನು ಹೊರತರಲು ಪ್ರಯತ್ನಿಸಿದರೂ, ಒಂದು ರೀತಿಯ ಖಿನ್ನತೆ ಅವನನ್ನು ಆವರಿಸಿ ಬಿಟ್ಟಿತ್ತು.
ಆ ಊರನ್ನೇ ತೊರೆದು ಬಂದ ರಾಜೀವ, ಬೆಂಗಳೂರಿನ ಹಾಸ್ಟೆಲೊಂದರನ್ನು ಸೇರಿ, ಸಣ್ಣ ಪುಟ್ಟ ಕೆಲಸ ಮಾಡಿಕೊಂಡು ಓದು ಮುಂದುವರೆಸಿದ್ದ. ಓದು ಮುಗಿಸಿ ಒಳ್ಳೆಯ ಕೆಲಸವನ್ನೂ ಹಿಡಿದಿದ್ದ. ನಿಧಾನವಾಗಿ ಹೊರ ಪ್ರಪಂಚಕ್ಕೆ ಬರಲಾರಂಭಿಸಿದ್ದ. ಕೆಲಸ, ಹೊಸ ಹೊಸ ಪರಿಸರ ಎಲ್ಲರ ಜೊತೆ ಕಲೆಯುವಂತೆ ಅವನನ್ನು ಪ್ರೇರೇಪಿಸುತ್ತಿತ್ತು. ಗೆಳೆಯರ ಒತ್ತಾಯದ ಮೇರೆಗೆ ಮದುವೆ ಮಾಡಿಕೊಳ್ಳಲು ಮುಂದಾದ. ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಜ್ಯೋತಿ ಎಂಬ ಹುಡುಗಿಯನ್ನು ಮೆಚ್ಚಿ ಮದುವೆಗೆ ಸಿದ್ಧತೆ ನಡೆದಿತ್ತು.
ಆ ಹುಡುಗಿಗೆ, ಅವರ ಮನೆಯವರಿಗೆ ಇವನ ಖಿನ್ನತೆಯ ಅರಿವಾಗಿತ್ತು. ಅವರುಗಳು ಇವನ ಮಾತನ್ನು ತೇಲಿಸಿ ಬಿಟ್ಟಿದ್ದರು. ವಿಚಾರವಂತರೂ, ಅಧುನಿಕ ಮನೋಭಾವದವರೂ ಆದ ಅವರು, ರಾಜೀವನ ಖಿನ್ನತೆಯನ್ನು ಹೋಗಲಾಡಿಸಿ, ಜ್ಯೋತಿಯನ್ನು ಮದುವೆ ಮಾಡಿ ಕೊಡಲು ಸಂತೋಷದಿಂದ ಮುಂದೆ ಬಂದಿದ್ದರು.
ಮುಂದಿನ ತಿಂಗಳೇ ಮದುವೆ ಇತ್ತು. ಮದುವೆಯ ಕೆಲಸಗಳಿಗೆಂದು ಆಗಾಗ್ಗೆ ತನ್ನ ಊರಾದ ಶಿವಮೊಗ್ಗಕ್ಕೆ ಜ್ಯೋತಿ ಹೋಗಿಬರುತ್ತಿದ್ದಳು. ಕಳೆದವಾರ ಹೊರಟವಳು ಊರು ತಲುಪುವ ಮುನ್ನವೇ ತೀವ್ರ ಜ್ವರದಿಂದ ಜ್ಞಾನ ತಪ್ಪಿ, ಅವಳನ್ನು ಸಹ ಪ್ರಯಾಣಿಕರು ಆಸ್ಪತ್ರೆಗೆ ಸೇರಿಸಿದ್ದರು, ಆಗ ಬೆಂಗಳೂರಿನ ತುಂಬಾ ಹಬ್ಬಿದ್ದ ಡೆಂಗೆ ಜ್ವರ ಜ್ಯೋತಿಯನ್ನು ಕಾಡಿತ್ತು. ವಿಷಯ ತಿಳಿದ ರಾಜೀವ ಹುಚ್ಚನಂತಾಗಿದ್ದ. ಈ ವೇಳೆಗೆ ತೀರಿಕೊಂಡಿದ್ದರೂ, ರಾಜೀವನ ಸೋದರಮಾವ ಕನಸಲ್ಲೂ ಬಂದು ಕಾಡಿ ಹೋಗಿದ್ದ.
ಮನು ಕಥೆ ನಿಲ್ಲಿಸಿ ಮೌನವಾಗಿ ಕುಳಿತ. ನೀರಿನ ಅಲೆಗಳ ಹೊಯ್ದಾಟದ ಹೊರತಾಗಿ ಬೇರೊಂದು ಸದ್ದಿಲ್ಲ. ಮೌನ ಎಷ್ಟು ಭೀಕರ ಎಂದು ಮೊದಲಬಾರಿಗೆ ಮನಸ್ಸಿಗೆ ತೋಚಿತ್ತು.
ಮುಂದಿನ ವಿಷಯ ಅಲ್ಪಸ್ವಲ್ಪ ನನಗೂ ತಿಳಿದಿತ್ತು. ನಾನು ಮನುವಿನ ಸ್ನೇಹಿತ ರಾಜೀವನ ಹೆಸರು ಕೇಳಿದ್ದೆ, ಆದರೆ ನೋಡಿರಲಿಲ್ಲ. ಮೊನ್ನೆಯ ದಿನ ಶಿವಮೊಗ್ಗದಿಂದ ಫೋನ್ ಬಂದದ್ದು, ಅದನ್ನು ತಿಳಿಸಲೆಂದು ರಾಜೀವನ ಮನೆಗೆ ಹೋಗಿ ಅವನು ಸಿಗದೇ ಹೋದದ್ದು ಮನು ಹೇಳಿದ್ದ. ಎರಡು-ಮೂರು ಸಲ ಪ್ರಯತ್ನ ಪಟ್ಟರೂ ರಾಜೀವ ಸಿಗಲಿಲ್ಲ, ಎಲ್ಲಿ ಹೋಗಿದ್ದಾನೆಂದು ಯಾರಿಗೂ ಗೊತ್ತೂ ಇರಲಿಲ್ಲ. ಈಗ ಎಲ್ಲವೂ ಸ್ಪಷ್ಟವಾಗಿ ಅರ್ಥವಾಗಲಾರಂಭಿಸಿತ್ತು.
ಕೆಲ ಕ್ಷಣಗಳು ಸುಧಾರಿಸಿಕೊಂಡು ಮನು ಮುಂದುವರೆಸಿದ, "ದುಡುಕಿಬಿಟ್ಟ, ಯಾರಿಗೂ ಆಗದ್ದು ನಿನಗೇನೂ ಆಗಿಲ್ಲ. ನಾನೂ ಸಹ ಹುಟ್ಟುತ್ತಿದ್ದಂತೆಯೇ ತಂದೆಯನ್ನು ಕಳೆದುಕೊಂಡೆ, ಹಾಗೆಂದು ನನ್ನ ತಪ್ಪದು ಎಂದು ಯಾರೂ ದೂರಲಿಲ್ಲ. ಎಲ್ಲರ ನೆತ್ತಿಯ ಮೇಲೆ ಕತ್ತಿ ತೂಗುತ್ತಿರುತ್ತದೆ, ಯಾವಾಗ ಯಾರ ಮೇಲೆ ಬೀಳುತ್ತದೆಯೋ ಊಹಿಸಲೂ ಆಗದು. ಆಗುವ ಸಾವಿಗೆ ಕಾರಣ ನಾನಲ್ಲ, ನೀನಲ್ಲ, ಆ ಜವರಾಯ, ಎಂದೆಲ್ಲಾ ದಿನವಿಡೀ ಉಪದೇಶ ಮಾಡುತ್ತಿದ್ದೆ. ಆದರೆ ಅವನು ಸುಧಾರಿಸಿಕೊಂಡು ಒಂದು ಹೆಜ್ಜೆ ಮುಂದೆ ಬಂದರೆ, ನಾಲ್ಕು ಹೆಜ್ಜೆ ಹಿಂದೆಳೆಯುವಂತ ಜನ ಇದ್ದೇ ಇರುತ್ತಿದ್ದರು".
ಮತ್ತೆ ಮೌನ.
ಕಡೆಗೆ ಹೇಳಿದೆ, "ನಡಿ ಮನು, ಮುಂದೇನು ಮಾಡುವುದು ನೋಡೋಣ, ಇಲ್ಲಿನ ಪೋಲೀಸರಿಗೆ ತಿಳಿಸಿ, ಟಿ.ಬಿ ನಲ್ಲೇನಾದರೂ ಫೋನ್ ಇದ್ದರೆ ಅವನ ಬೇರೆ ಸ್ನೇಹಿತರು ಯಾರಾದರೂ ಬರುತ್ತಾರೋ ನೋಡೋಣ".
ಇಬ್ಬರೂ ಎದ್ದು ಹೊರಡಲಣಿಯಾದೆವು.
"ಒಂದು ಇರು ನಿಮಿಷ ಬಂದೆ" ಎಂದು ಮನು ರಾಜೀವನ ಬಳಿಗೆ ಹೋದ.
"ಏಯ್ ಮನೂ ಮುಟ್ಟಬೇಡ, ಪೋಲೀಸರು ಪೋಸ್ಟ್ಮಾರ್ಟಮ್ ಮಾಡಿದರೂ ಮಾಡಬಹುದು".
" ಅಲ್ಲ ಕಣೋ, ನಾವು ವಾಪಸ್ ಬರೋದು ಎಷ್ಟು ಹೊತ್ತು ಆಗುತ್ತೋ ಏನೋ, ಅಕಸ್ಮಾತ್ ನೀರು ಹೆಚ್ಚಾಗಿ ರಾಜೀವ ಕೊಚ್ಚಿಕೊಂಡು ಕೆಳಗೆ ಹೋಗಿ ಬಿಡಬಹುದು, ಬಂಡೆಗಳು ಅಡ್ಡವಿರುವ ಹಾಗೇನಾದರೂ ಮಾಡಲಾಗುತ್ತದೇನೋ ನೋಡುತ್ತೇನೆ".
ಯಾವುದೇ ಕ್ಷಣದಲ್ಲಾದರೂ ಹಾಗೆ ಆಗಬಹುದಾದ ಸಾಧ್ಯತೆಗಳು ಇತ್ತು. ಅಷ್ಟು ಹೊತ್ತೂ ದೇಹ ಅಲ್ಲೇ ಇರುವುದೇ ಆಶ್ಚರ್ಯವೆನಿಸಿತ್ತು. ಆದರೆ ಮನುವಿನ ಆಲೋಚನೆ ಸರಿ ಎನಿಸಲಿಲ್ಲ.

ಮುಂದಿನ ಪುಟ ನೋಡಿ ...

ಮನು ನೀರಿನಲ್ಲಿ ತೇಲಾಡುತ್ತಿರುವ ದೇಹವನ್ನು, ಬಟ್ಟೆಯ ಹಿಡಿದೆಳೆದು, ಬಂಡೆಯ ಸಂದಿಗಳಿಗೆ ನೂಕಲೆತ್ನಿಸುತ್ತಿದ್ದ. ಆದರೆ ಅದು ಅಷ್ಟು ಸುಲಭವಾಗಿರಲಿಲ್ಲ. ಜಾರುತ್ತಿದ್ದ ಬಂಡೆಗಳು, ನೀರಿನ ಹೊಡೆತ, ತೂಕವಾಗಿದ್ದ ಶರೀರ, ಮನುವಿನ ಪ್ರಯತ್ನವನ್ನು ತ್ರಾಸಗೊಳಿಸುತ್ತಿತ್ತು.
"ಬೇಡ ಬಾ ಮನು, ಸುಮ್ಮನೆ ಏನೇನೋ ಮಾಡ್ಬೇಡ....ಮನು...ಮನೂ..., ಹುಷಾರು...", ಎಂದು ಕೊಗಿಕೊಂಡೆ ಅಷ್ಟೇ.
ಪಾಚಿಯಲ್ಲಿ ಜಾರಿ ಬಿದ್ದಿದ್ದ ಮನು. ಮತ್ತೆ ಮೇಲೇಳಲು ಹೋಗಿ ನುಣುಪಾದ, ಜಾರುತ್ತಿದ್ದ ಬಂಡೆಗಳ ಮೇಲೆ ಕಾಲಿಟ್ಟಿದ್ದ. ಎಲ್ಲಿ ನಿಂತಿದ್ದೇನೆ ಎಂದು ಗಮನವೇ ಇಲ್ಲದ ಮನು ಈ ಸಲ ಆಯ ತಪ್ಪಿ ಜಾರಿದವನು, ಹರಿಯುತ್ತಿದ್ದ ನೀರಿನೊಂದಿಗೆ ಪ್ರಪಾತಕ್ಕೇ ಬಿದ್ದಿದ್ದ.
ದಿಗ್ಭ್ರಾಂತನಾಗಿ "ಮನೂ ಮನೂ ಎಂದು" ಎಂದು ಚೀರಿದೆ.
ಏನಾಗುತ್ತಿದೆ ಎಂದು ಅರಿವಾಗುವಷ್ಟರಲ್ಲೇ, ಎಲ್ಲವೂ ಮುಗಿದೇ ಹೋಗಿತ್ತು.

****

"ಏನು ಮಾಡುವುದೀಗ", ಎದುರಿಗೆ ತೇಲಾಡುತ್ತಿರುವ ರಾಜೀವನನ್ನೇ ನೋಡಿದೆ.
"ಇನ್ನೇನು ಮಾಡೋದು, ನೀನೂ ಕೂಡ ಕೆಳಗೆ ಬೀಳೋದೊಂದೇ ದಾರಿ. ನಾನು ಹೇಳಲಿಲ್ವಾ, ನನ್ನಿಂದಲೇ ಮನು ಸತ್ತ, ಜ್ಯೋತಿ ಸತ್ತಳು. ಅಲ್ಲದೆ ಮಗನಿಗಾಗಿ ಅನುಕ್ಷಣವೂ ಕಾತರಿಸುವ ಮನುವಿನ ತಾಯಿಗೆ ನೀನು ಹೇಗೆ ಮುಖ ತೋರಿಸುತ್ತಿಯಾ? ಈ ಮುಖ ಹೊತ್ತು ಅವರೆದುರು ಹೇಗೆ ಹೋಗ್ತೀಯಾ? ಹೋಗು, ನೀನೂ ಸಾಯಬೇಕು, ಅದೇ ಸರಿ". ರಾಜೀವ ಗಹಗಹಿಸಿ ನಕ್ಕಂತಾಯ್ತು.
ನನಗೆ ಹುಚ್ಚು ಹಿಡಿದಂತಾಗಿ ತಲೆದಿರುಗಿ ಕುಸಿದೆ. ಕ್ಷಣಕಾಲದ ನಂತರ ಮನದಲ್ಲೊಂದು ತೀರ್ಮಾನ ಮೂಡಿತ್ತು.
"ಇಲ್ಲ ರಾಜೀವ, ನಾನು ಸಾಯುವುದಿಲ್ಲ. ನಿನಗೆ ಬದುಕಿರುವವರೆಗೂ ವೃಥಾ ಕಳಂಕ ಅಂಟಿದ್ದು ಸಾಕು, ಸತ್ತ ಮೇಲೂ ಏಕೆ ಬಯಸುತ್ತೀಯ. ಯಾರ ಸಾವಿಗೂ ನೀನು ಹೊಣೆಗಾರನಲ್ಲ. ನಾನು ಇಲ್ಲಿಂದ ಹೋಗಿ ಆ ಕಳಂಕವನ್ನು ಅಳಿಸಲು ಪ್ರಯತ್ನಿಸುತ್ತೇನೆ.
ಅದೂ ಅಲ್ಲದೆ, ಮನು ಹೇಳಿದ ಹಾಗೆ ನೀನು ದುಡುಕಿದೆ. ನೀನಿನ್ನೂ ಬದುಕಬೇಕಿತ್ತು. ನೀನು ತಿಳಿದ ಹಾಗೆ, ಜ್ಯೋತಿ ಸತ್ತಿಲ್ಲ, ಚೇತರಿಸಿಕೊಳ್ಳುತ್ತಿದ್ದೇನೆ, ರಾಜೀವನಿಗೆ ತಿಳಿಸಿಬಿಡಿ ಎಂದು ಹೇಳಿದ್ದಳು. ನಿನ್ನ ಸೂಕ್ಷ್ಮ ಮನಸ್ಸಿನ ಅರಿವಿದ್ದ ಅವಳು ನಿನ್ನ ಬಗ್ಗೆ ಕಳವಳಗೊಂಡಿದ್ದಳು. ಈಗ ನಾನವಳಿಗೆ ನಿನ್ನ ವಿಷಯ ತಿಳಿಸಬೇಕಾಗಿದೆ." ಕಡೆಯ ಬಾರಿಗೆ ರಾಜೀವನ ಮುಖ ನೋಡಿದೆ, ಆಗ ಕಂಡದ್ದು, ಶಾಂತ, ಮುಗ್ಧ ಮುಖಭಾವ.
ಅಲ್ಲಿಗೆ ಪ್ರಾಣ ಕಳೆದುಕೊಳ್ಳುವ ಹುಚ್ಚು ಆಲೋಚನೆ ಬಿಟ್ಟು, ಮುಂದೆ ಮಾಡಬೇಕಾದ ಕೆಲಸಗಳ, ಎದುರಿಸ ಬೇಕಾದ ಸನ್ನಿವೇಶಗಳ ಬಗ್ಗೆ ಚಿಂತಿಸುತ್ತಾ ಅಲ್ಲಿಂದ ಹೊರಟೆ. ▪

****

ದಾಸರ ಹಾಡುಗಳನ್ನು ಮಂಗಳೂರು, ಬೀದರ್, ಹರಪನಹಳ್ಳಿ, ಬೆಳಗಾಂ, ಮೈಸೂರು, ಮಲೆನಾಡು, ಭಾಗಗಳಲ್ಲಿ ವಿವಿಧ ಶೈಲಿಗಳಲ್ಲಿ, ವಿವಿಧ ಸಂಪ್ರದಾಯಗಳಲ್ಲಿ ಹಾಡುತ್ತಾರೆ. ಇವರಲ್ಲಿ ಬಹಳಷ್ಟು ಜನ ಭಕ್ತಿ ಭಾವದಿಂದ, ಮುಗ್ಧ ಭಾವುಕರಾಗಿ ಹಾಡಿಕೊಳ್ಳುತ್ತಾರೆ. ಹಾಗಾಗಿ ದಾಸರಹಾಡುಗಳ ಸಾಹಿತ್ಯದಲ್ಲಿ ಅಲ್ಲಲ್ಲಿ ಪಾಠಪಲ್ಲಟ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ತಮ್ಮ 'A History of Dwaitha School of Vendantha & its Literature' ಗ್ರಂಥದ ಎರಡನೆಯ ಸಂಪುಟದಲ್ಲಿ ಡಾ.ಬಿ.ಎನ್. ಕೆ. ಶರ್ಮ ಅವರು ಹೀಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'The regular history of the Haridasa Kuta as at present traced is thus only from the time of Narahari Thirtha. This literature is very voluminous and many interpretations and coorruptions have crept into the corpus of the materials, owing to lack of central authority and tradition and widespread diffusion in various parts of the country. An authentic and definitve edition of the entire literature is desired'

ಶಾಸ್ತ್ರೀಯ ಸಂಶೋಧನೆಯ ದೃಷ್ಟಿಯಿಂದ ದಾಸಸಾಹಿತ್ಯದಲ್ಲಿ ಕ್ಷೇತ್ರಕಾರ್ಯಗಳು ಬಹಳಷ್ಟು ಆಗಬೇಕಿದೆ. ಹರಿದಾಸ ಸಾಹಿತ್ಯದ ಶಬ್ದ ಪ್ರಯೋಗಗಳನ್ನು, ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಒಂದು ಕೋಶ ಸಿದ್ಧಪಡಿಸಬೇಕಿದೆ. ಪುರಾಣನಾಮ ಚೂಡಾಮಣಿಯಂತಹ ಗ್ರಂಥದಂತೆಯೇ ದಾಸಸಾಹಿತ್ಯದಲ್ಲಿ ಬಂದಿರುವ ಪೌರಾಣಿಕ ಸಂದರ್ಭದ ಎಲ್ಲ ವಿಚಾರಗಳನ್ನು ಸಂಕ್ಷಿಪ್ತವಾಗಿ ನಿರೂಪಿಸುವ ಕೆಲಸವಾಗಬೇಕಾಗಿದೆ. ವಚನಸಾಹಿತ್ಯವನ್ನು ನಾನಾ ಭಾಷೆಗಳಲ್ಲಿ ಅನುವಾದ ಮಾಡಿಸಿದಂತೆ,ದಾಸಸಾಹಿತ್ಯದ ಮೇಲ್ಮೆ ಮಹತಿಗಳನ್ನು ಜಗತ್ತಿಗೆ ತೋರುವ ರೀತಿಯಲ್ಲಿ ಅರ್ಥಪೂರ್ಣವಾಗಿ ಹಲವಾರು ಭಾಷೆಗಳಲ್ಲಿ ಅನುವಾದ ಮಾಡಿಸಬೇಕಿದೆ.

ಇನ್ನು ದೀನದಲಿತರ ಸೇವೆ, ಲೋಕಸೇವೆ, ಮಾನವ ಕುಲದ ಕಲ್ಯಾಣ, ಸಂಸ್ಕøತಿಯ ಉದ್ದೀಪನ, ಸಂಸ್ಕಾರ ನೀಡುವ ಸಂದೇಶಗಳು ಇರುವ ದಾಸರ ಹಾಡುಗಳನ್ನೆಲ್ಲಾ ಸಂಶೋಧಿಸಿ ಹೊರತೆಗೆದು ದಾಸಸಾಹಿತ್ಯದ ಸಾರ್ವತ್ರಿಕ ಹಾಗೂ ಸಾರ್ವಕಾಲಿಕ ಮೌಲ್ಯಗಳ ಪುನರ್ ಪ್ರತಿಷ್ಠಾಪನೆಯಾಗಬೇಕಿದೆ. ಮತವನ್ನು ಮೀರಿ ಮತಿ ನೀಡುವ, ಸದ್ಗತಿ ನೀಡಬಲ್ಲ ಮಾನವ ನೀತಿಗಳ ಅಡಕವೇ ದಾಸಸಾಹಿತ್ಯವೆಂದು ಮತ್ತಷ್ಟು ದಿಟ್ಟವಾಗಿ, ದಟ್ಟವಾಗಿ ಸಾರುವ ಕೆಲಸ ಆಗಬೇಕಿದೆ. ಮನುಷ್ಯರ ಮನಸ್ಸು, ಬುದ್ಧಿ, ರೀತಿ ನೀತಿಗಳನ್ನು ದಾಸರು ಪರಿಣಾಮಕಾರಿಯಾಗಿ ತಿದ್ದಿರುವ, ವ್ಯಕ್ತಿತ್ವಗಳನ್ನು ರೂಪಿಸಿರುವ, ಶತಮಾನಗಳ ಕಾಲ ಲಕ್ಷ ಲಕ್ಷ ಜನರ ಮುಕ್ತವಿಶ್ವವಿದ್ಯಾನಿಲಯವಾಗಿ ಕೆಲಸ ಮಾಡಿ ಮಹತ್ವದ ಕೊಡುಗೆಯನ್ನ ನೀಡಿರುವುದನ್ನು ಪ್ರಭಾವಪೂರ್ಣವಾಗಿ ಗಟ್ಟಿ ದನಿಯಲ್ಲಿ ಎಲ್ಲರಿಗೂ ಮನಗಾಣಿಸಿಕೊಡಬೇಕಾಗಿದೆ.

ಸುಳಾದಿಗಳ ಬಗ್ಗೆ, ಅದರ ಸ್ವರೂಪದ ಬಗ್ಗೆ ಅದನ್ನು ಹೇಳುವ ಸಾಂಪ್ರದಾಯಿಕ ಕ್ರಮದ ಬಗ್ಗೆ ಮತ್ತಷ್ಟು ಶೋಧನೆ ಆಗಬೇಕಿದೆ. ರಾಗಮಾಲಿಕಾ ಪ್ರಬಂಧಗಳನ್ನು ತಾಳಮಾಲಿಕಾ ಪ್ರಬಂಧವಾಗಿ ಪರಿವರ್ತನೆ ಮಾಡಿದ ಪ್ರಯೋಗಗಳು, ವಿಜಯದಾಸರಲ್ಲಿ ಅವು ಕಂಡ ಸಫಲತೆ ಅದ್ಭುತ. ಆದರೆ ಕಳೆದ ಶತಮಾನಗಳಲ್ಲಿ ಸುಳಾದಿರಚನೆಯ, ಅದನ್ನು ರೂಢಮೂಲವಾಗಿ ಹೇಳುವ ಪರಿಪಾಠ ಬಹಳ ಶಿಥಿಲವಾಗಿದೆ ಹಾಗೂ ನಿಂತಂತೆ ಗೋಚರವಾಗುತ್ತಿದೆ.

ಮುಂದಿನ ಪುಟ ನೋಡಿ ...

ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ, ಹರಿದಾಸ ಮನೋಧರ್ಮ, ಶೈಲಿಯ ವೈಶಿಷ್ಟ್ಯ ಹಾಗೂ ಸಂಗೀತ ಪ್ರಪಂಚಕ್ಕೆ ಅದರಿಂದ ಸಂದಿರುವ ಕೊಡುಗೆಯ ಬಗ್ಗೆ ಈಗಾಗಲೇ ಡಾ. ಶೀಲಾದಾಸ್ ಅವರು ಕೆಲಸಮಾಡಿದ್ದರೂ, ಈ ನಿಟ್ಟಿನಲ್ಲಿ ಅವರ ಕೆಲಸವನ್ನು ಮುಂದುವರೆಸಿಕೊಂಡು ಹೋಗುವ ಅಗತ್ಯವಿದೆ. ವಿಜಯದಾಸರ ಒಂದೊಂದು ಸುಳಾದಿಗಳಿಗೂ, ಭಾಷೆ, ಶೈಲಿ, ತತ್ವ ನಿರೂಪಣೆ, ಸಾಂದರ್ಭಿಕ ಹಿನ್ನೆಲೆ ಗ್ರಂಥಗಳು, ಮತ್ತು ಅದರ ಸಂದೇಶ ಕುರಿತಾದ ವ್ಯಾಪಕ ಅಧ್ಯಯನ ನಡೆಯಬೇಕಿದೆ. ಅನುಭವ ಮಂಟಪದಂತಹ ಒಂದು ವಿದ್ವಾಂಸರ ತಂಡ ಈ ಕಾರ್ಯ ಕೈಗೆತ್ತಿಕೊಳ್ಳಬೇಕಿದೆ.

ಕುಮಾರವ್ಯಾಸನ ಭಾರತದಂತೆಯೇ, ಹರಿದಾಸಸಾಹಿತ್ಯವೂ, ಗಮಕ ಕಲೆಯ ಶೋಭೆಗೆ, ಅದರ ರಸಾನುಭೂತಿಯ ವಿಶಿಷ್ಟ ಅಭಿವ್ಯಕ್ತಿಗೆ ಹೊಸದೊಂದು ಆಯಾಮ ನೀಡಿದೆ. ಹಾಗೆಯೇ ಆಧುನಿಕ ಕಾಲದ ರಮ್ಯ ಪ್ರಜ್ಞೆಯ, ಭಾವಗೀತೆಗಳ, ಭಕ್ತಿಗೀತೆಗಳ ಹಾಗೂ ಸುಗಮಸಂಗೀತ ರಚನೆಯ ಪ್ರಯೋಗಕ್ಕೆ ಪ್ರೇರಣೆ ನೀಡಿದ್ದು ದಾಸಸಾಹಿತ್ಯ. ಈ ವಿಚಾರಗಳ ಬಗ್ಗೆ ಮತ್ತಷ್ಟು ಸುದೀರ್ಘವಾದ ಶೋಧನಾತ್ಮಕ ಕೆಲಸ ಆಗಬೇಕಿದೆ.

ಹರಿಕಥೆಯಲ್ಲಿ ಹಾಡು, ಅಭಿನಯ, ವಿವರಣೆ, ವಿಸ್ಮಯ, ನೀತಿಕಥೆಗಳು, ಉಪಕಥೆಗಳು ಮುಂತಾದುವಿದ್ದು, ಇಂತಹ ಹರಿಕಥಾ ಪ್ರಕಾರಕ್ಕೆ ಮೂಲದ್ರವ್ಯ ಒದಗಿಬಂದಿದ್ದೇ ದಾಸಸಾಹಿತ್ಯದಿಂದ. ಹರಿದಾಸರು ರಚಿಸಿದ ಬಯಲಾಟಗಳು ಸಾವಿರಾರು ಪ್ರದರ್ಶನಗಳನ್ನು ಕಂಡು ಲಕ್ಷಾಂತರ ಜನಕ್ಕೆ ದೈವಿಕ ಆನಂದದ ಅನುಭವ ತಂದುಕೊಟ್ಟಿದೆ. 1780ರ ಸುಮಾರಿಗೆ ಅಪರಾಳ ತಮ್ಮಣ್ಣನ ಶ್ರೀಕೃಷ್ಣಪಾರಿಜಾತದಂತಹ ಬಯಲಾಟ ಎಷ್ಟು ಪ್ರಸಿದ್ಧವಾಗಿತ್ತೆಂದರೆ, ಅದರ ಸ್ಫೂರ್ತಿಯಿಂದ ಅಣ್ಣಾ ಕಿರ್ಲೋಸ್ಕರ್ ಎಂಬುವರು ಅದನ್ನು ಮರಾಠಿಗೆ ಅನುವಾದಿಸಿ ಮಹಾರಾಷ್ಟ್ರದಲ್ಲಿ ಪ್ರಯೋಗಕ್ಕೆ ತಂದರು. ಸಿಂಗಾಜೋಷಿ ರಾಮಾಚಾರ್ಯರು 'ಗುರು ಜಗಜನ್ಮಾದಿಕಾರಣವಿಠಲ' ಅಂಕಿತದಿಂದ ಐದು ಬಯಲಾಟಗಳನ್ನು ರಚಿಸಿದ್ದಾರೆ. ಇವರು ಅಪರಾಳ ತಮ್ಮಣ್ಣನ ಸಮಕಾಲೀನರು. ಮುಂದೆ ಶ್ಯಾಮಸುಂದರ ವಿಠಲದಾಸರ ಬಯಲಾಟಗಳು ಪ್ರಸಿದ್ಧಿಯಾದವು. ಅನೇಕ ಮಂದಿ ಮುಂದೆ ಈ ಕ್ಷೇತ್ರದಲ್ಲಿ ಕೊಡುಗೆ ನೀಡಿದರು. ಹಾಗೆಯೇ ಹರಿದಾಸರ ಹಿನ್ನೆಲೆಯ ಹಾಡು, ಕಥೆ, ವಿವರಣೆಯ ನಿರೂಪಣೆಯ ರಂಗಭೂಮಿಯೂ ಪ್ರಚಲಿತವಾಯಿತು. ಹರಿದಾಸಸಾಹಿತ್ಯವೇ, ಮೂಲದ್ರವ್ಯವಾಗಿ ಅದರ ಅನುಭವದಿಂದ ಬ್ಯಾಲೆನೃತ್ಯ, ಸಂಗೀತ, ಚಿತ್ರಕಲೆ, ರಂಗಪ್ರಯೋಗಗಳು ಮೂಡಿಬಂದವು. ಈ ಎಲ್ಲದರ ಬಗ್ಗೆ ವಿಶಿಷ್ಟ ಸಂಶೋಧನೆ ಆಗಬೇಕಿದೆ. ಇನ್ನು ದಾಸರ ಹಾಡುಗಳ ಸಂಗ್ರಹದಲ್ಲಿ ಅನೇಕ ಬಾರಿ ಅಂಕಿತ ಸಂದಿಗ್ಧವಿರುತ್ತದೆ. ಆಗ ಮೂಲ ಆಕರಗಳ ಸಂಖ್ಯಾ ಪ್ರಮಾಣವನ್ನು ಆಧರಿಸಿ, ಹಾಗೂ ಸಂಪ್ರದಾಯವನ್ನು ಅನುಸರಿಸಿ ಅಂಕಿತ ನಿರ್ಧಾರ ಮಾಡಬೇಕಾಗುತ್ತದೆ. ಹರಿದಾಸರ ಕೃತಿಗಳಲ್ಲಿ ಸಾಹಿತ್ಯದ ಪಾಠ ನಿರ್ಣಯದಷ್ಟೇ, ಮುಖ್ಯವಾಗಿ ರಾಗತಾಳಗಳ ಸಂಗೀತ ನಿರ್ಧಾರವೂ ಮುಖ್ಯ. ಅನೇಕ ಪ್ರತಿಗಳಲ್ಲಿ ಒಂದೇ ಹಾಡಿಗೆ ಬೇರೆ ಬೇರೆ ರಾಗಗಳ ಉಲ್ಲೇಖವಿರುತ್ತದೆ. ದಾಸಸಾಹಿತ್ಯದ ಸ್ಪಷ್ಟ ಅರಿವಿರುವ ಸಂಗೀತ ವಿದ್ವಾಂಸರು ಈ ಬಗ್ಗೆ ಆಯಾಕೃತಿಗಳ ಸಾಂದರ್ಭಿಕ ಹಿನ್ನೆಲೆ, ಅಂತರ್ತತ್ವ, ಭಾವ, ಹಾಗೂ ಅದರ ಮನೋಧರ್ಮ ಹಿಡಿದು ರಾಗತಾಳಗಳನ್ನು ಖಚಿತಗೊಳಿಸಬೇಕಾಗಿದೆ. ಸುಳಾದಿ ಹೇಳುವ ಜನ, ಸಂಪ್ರದಾಯ, ಸುಳಾದಿಗಳ ಪದ್ಧತಿ ಶಿಥಿಲವಾಗುತ್ತಿರುವ ಪ್ರಸ್ತುತ ಪರಿಸ್ಥಿತಿಯಲ್ಲಿ ಆ ಕ್ಷೇತ್ರದ ಸಮಸ್ಯೆಗಳ ಹಿನ್ನೆಲೆಯಲ್ಲಿ ಆಳವಾದ ಸಂಶೋಧನೆಗಳು ನಡೆಯಬೇಕಿದೆ.

ಇನ್ನು ಅರ್ವಾಚೀನ ಹರಿದಾಸರ ಬಗ್ಗೆ, ಬಹಳಷ್ಟು ಸಂಶೋಧನೆಯಾಗಬೇಕಾಗಿದೆ. ಅದ್ಭುತ ಸಾಹಿತ್ಯವೆನಿಸುವ ತಂದೆವೆಂಕಟೇಶವಿಠಲದಾಸರು, ಉರಗಾದ್ರಿವಿಠಲದಾಸರಂತಹ ಅನೇಕ ಆಧುನಿಕ ಹರಿದಾಸರ ಬಗ್ಗೆ ಸಮಗ್ರ ಸಂಶೋಧನೆಯಾಗಬೇಕಿದೆ. ಇನ್ನು ದಾಸಸಾಹಿತ್ಯದ ಛಂದಸ್ಸು, ಭಾಷೆ, ಶೈಲಿ, ಅಭಿವ್ಯಕ್ತಿ ವಿನ್ಯಾಸ, ಸರಳತೆ, ಸಾರ್ಥಕತೆ, ಧ್ವನಿ, ಮುಂತಾದ ಸಾಹಿತ್ಯ ವೈಶಿಷ್ಟ್ಯತೆಯ ಬಗ್ಗೆ ಸಂಶೋಧನೆಗಳು ನಡೆಯಬೇಕಾಗಿದೆ.

ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು

ನೀವು ಮಾಡಿ

ಚಳಿಗಾಲಕ್ಕೆ ಯಾವ ಬಟ್ಟೆ ಸೂಕ್ತ!

ಸಂಕಲನ: ಬದರಿ ತ್ಯಾಮಗೊಂಡ್ಲು

ಕೊರೆಯುವ ಚಳಿಗಾಲಕ್ಕೆ ಯಾವ ಬಟ್ಟೆ ಸೂಕ್ತ ಎಂದು ತಿಳಿದುಕೊಳ್ಳಲು ಈ ಪ್ರಯೋಗ ಮಾಡೋಣ.

ಬೇಕಾಗುವ ಸಾಮಗ್ರಿ:

4 ಲೋಟದಲ್ಲಿ (ಗಾಜು) ಸುಮಾರು 37 ಡಿಗ್ರಿ ಉಷ್ಣಾಂಶವಿರುವ ನೀರು (ಆರೋಗ್ಯವಂತ ಮನುಷ್ಯನ ತಾಪಮಾನ ಸುಮಾರು 37 ಡಿಗ್ರಿ)

4 ತರಹದ ಬಟ್ಟೆ ತುಂಡುಗಳು (ಉಣ್ಣೆ (wool), ಹತ್ತಿ, ನೈಲಾನ್, ಜಾಳಾದ ಬಟ್ಟೆ - ಬಟ್ಟೆಯ ತುಂಡು ಲೋಟ ಸುತ್ತುವಷ್ಟಿರಬೇಕು)

ಒಂದು ಥರ್ಮಾಮೀಟರ್

ವಿಧಾನ:

ಉಷ್ಣ ನೀರಿರುವ ಪ್ರತಿಯೊಂದು ಲೋಟಕ್ಕೂ ಒಂದೊಂದು ತರಹದ ಬಟ್ಟೆ ತುಂಡುಗಳನ್ನು ಸುತ್ತಿರಿ

ಸುಮಾರು 15-20 ನಿಮಿಷ ಸುಮ್ಮನೆ ಇರಲು ಬಿಡಿ

ನಂತರ ಪ್ರತಿಯೊಂದರ ಲೋಟದಲ್ಲಿ ಥರ್ಮಾಮೀಟರ್ ಇರಿಸುತ್ತ ತಾಪಮಾನ ಎಷ್ಟಿದೆಯೆಂದು ನೋಡಿ

ಏನಾಗುತ್ತದೆ:

ಉಣ್ಣೆಯಿಂದ ಆವೃತವಾದ ಲೋಟದ ನೀರಿನ ತಾಪಮಾನ ಮಿಕ್ಕೆಲ್ಲವುದಕ್ಕಿಂತ ಹೆಚ್ಚಿರುತ್ತದೆ. ಏಕೆಂದರೆ ಉಣ್ಣೆಯ ಎಳೆಗಳು ಹೆಚ್ಚು ಒತ್ತೊತ್ತಾಗಿ ಹೆಣೆಯಲ್ಪಟ್ಟಿರುತ್ತದೆ. ಉಷ್ಣತೆಯು ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕೆ ಜಾಗವೇ ಇರುವುದಿಲ್ಲ. ಹೀಗಾಗಿ ಲೋಟದ ನೀರಿನಲ್ಲಿನ ಉಷ್ಣತೆಯನ್ನು ಹಾಗೆ ಹಿಡಿದಿಟ್ಟುಕೊಂಡಿರಲು ಸಾಧ್ಯವಾಗುತ್ತದೆ.

ಇದೇ ನಿಯಮದಡಿ, ನಾವುಗಳು ಉಣ್ಣೆಯಿಂದ (wool) ಮಾಡಿದ ಬಟ್ಟೆಗಳನ್ನು ಹಾಕಿಕೊಂಡಾಗ, ಅದು ನಮ್ಮ ದೇಹದ ಉಷ್ಣತೆಯು ಆಚೆ ಹೋಗದಂತೆ ತಪ್ಪಿಸುವುದರಿಂದ ದೇಹದ ಶಾಖವು ಕಡಿಮೆ ಆಗುವುದು ತಪ್ಪುತ್ತದೆ. ಹೀಗಾಗಿ ಚಳಿಗಾಲದಲ್ಲಿ ಉಣ್ಣೆಯಿಂದ ಮಾಡಿದ ಬಟ್ಟೆ ಅಥವಾ ಸುಲಭವಾಗಿ ಉಷ್ಣತೆಯು ಹರಿದುಹೋಗದಂತಹ ಬಟ್ಟೆಗಳನ್ನು ಧರಿಸಿದರೆ, ಚಳಿಯಿಂದ ಸಂರಕ್ಷಿಸಿಕೊಳ್ಳಬಹುದು. ಇಂತಹ ಬಟ್ಟೆಗಳಿಲ್ಲದಿದ್ದರೂ, ಸುಮಾರಾಗಿ ಉಷ್ಣಾಂಶ ಹಿಡಿದಿಟ್ಟುಕೊಳ್ಳುವ ಬಟ್ಟೆಗಳನ್ನು ಎರಡು ಮೂರು ಪದರ ಕೂಡ ಧರಿಸಬಹುದು. ▪

ಜಾಣ ಕರ್ನಾಟಕ – ಉತ್ತರ

೧. ಇದು ಸೌರ ಶಕ್ತಿಯ ವಿದ್ಯುತ್ ಉತ್ಪಾದನಾ ಕೇಂದ್ರ. ಇದು ಪ್ರಪಂಚದ ಅತ್ಯಂತ ದೊಡ್ಡ ಸೌರಶಕ್ತಿ ಪಾರ್ಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದು ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನಲ್ಲಿದೆ.

೨.ಗಾಳಿ ವಿದ್ಯುತ್ ಸ್ಥಾವರಗಳು.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ವಿವಿಡ್ ಸಿಡ್ನಿ ದೋಣಿ ವಿಹಾರ

೧೬ ಜೂನ್ ೨೦೧೮, ಸಂಜೆ ೬ರಿಂದ

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ನಾರಾಯಣ - 0423 634 979, ನಾಗಭೂಷಣ್ - 0433 763 911

sugamakannada@gmail.com

ಏಪ್ರಿಲ್ ನ ಹಿಮಬಿಂದು (ಚಲನಚಿತ್ರ ಪ್ರದರ್ಶನ)

ಜೂನ್ ೨೪ ಮತ್ತು ೩೦ ಸಂಜೆ ೫:೩೦ಕ್ಕೆ

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

0423 634 979, 0433 763 911, 0423 760 168, 0427 798 491

0414 992 528, 0400 548 752

sugamakannada@gmail.com

ಈ ಸಂಚಿಕೆಯನ್ನು ನಿಮಗಾಗಿ ತಂದವರು - ಸುಗಮ ಕನ್ನಡ ಕೂಟ - ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು - ಬದರಿ ತ್ಯಾಮಗೊಂಡ್ಲು ~ ಸಂಕಲನ - ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ -ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.